

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 Issue : 46 Wednesday 23-10-2024 E-mail : maruti.b.hosamani76@gmail.com Page: 4 Price : Rs. 1/-


## ನಕಲಿ ಗೊಬ್ಬರ ವರದಿ ಬಂದರು ಕೃಷಿ ಅಧಿಕಾರಿ ಗುರುನಾಥ-ಕಣ್ಣಿದ್ದು ಕುರುಡರಂತೆ ಬೇಜವಾಬ್ದಾರಿ ವರ್ತನೆ







**ಸಿಹಿ ಕಹಿ ಸುದ್ದಿ**

**ಮಲ್ಲದಗುಡ್ಡ :** ನಕಲಿ ಗೊಬ್ಬರ ಮಾರಾಟ ಮಾಡಿದರೆ ಕ್ರಿಮಿನಲ್ ಪ್ರಕರಣ ದಾಖಲು ಮಾಡಲಾಗುವುದು ಎಂದು ಸರಕಾರ ಹೇಳಿದರೆ, ಸರಕಾರವೇ ಮಸ್ಕಿ ತಾಲೂಕಿನ ಹಾಲಾಪುರ ಹೋಬಳಿಯ ಮಲ್ಲದಗುಡ್ಡ ಕ್ಯಾಂಪ್ ನಲ್ಲಿರುವ ಶ್ರೀನಿವಾಸ ಆಗ್ರೋ ಟ್ರೇಡರ್ಸ್ ಮಾಲೀಕ ಬಿ.ವಾಸು ನಕಲಿ ಗೊಬ್ಬರ ನೀಡಿರುವುದು ಸತ್ಯವಾಗಿದ್ದರು ಕೃಷಿ ಅಧಿಕಾರಿ ಗುರುನಾಥ ಕ್ರಮ ಜರುಗಿಸದೆ ಮೌನ ತಾಳಿದ್ದಾರೆಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಮಾಯಕ ರೈತರಿಗೆ ಮೋಸ ಮಾಡಿದರು ಸಹ ನಮ್ಮನ್ನು ಯಾರು ಕೇಳುತ್ತಾರೆಂದು ಬಿ.ವಾಸು ಎಂಬ ವ್ಯಕ್ತಿ ನಕಲಿ ಗೊಬ್ಬರ ನೀಡಿರುವ ಅಂಶ ಸತ್ಯವಾಗಿದ್ದರು ಕೃಷಿ ಅಧಿಕಾರಿ ಗುರುನಾಥ ಮಾಲೀಕನ ಜೊತೆ ಶಾಮೀಲಾಗಿ ಪ್ರಕರಣ ದಾಖಲಿಸದೆ ರೈತರಿಗೆ ಮೋಸ ಮಾಡುತ್ತಿದ್ದಾರೆಂದು ರೈತರು ನ್ಯಾಯಬೇಕು ಎಂದು ಒತ್ತಾಯಿಸಿದ್ದಾರೆ.

ಬಡ ರೈತರ ಬೆನ್ನೆಲುಬನ್ನು ಬಿ.ವಾಸು ಎಂಬಾತ ನಕಲಿ ಗೊಬ್ಬರ ನೀಡಿ ರೈತರನ್ನು ಸಾಯಿಸುವ ಕೆಲಸ ಮಾಡುತ್ತಿದ್ದರು ಸರಕಾರದ ಅಧಿಕಾರಿಗಳು ಬಡ ರೈತರ ಗೋಣು ಮುರಿಯುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಹೇಬ್ರೆ ಅಮಾಯಕ ರೈತರ ಕಷ್ಟ ಕೇಳಿಯಾದರು ನ್ಯಾಯ ಕೊಡುವ ವ್ಯವಸ್ಥೆ ಮಾಡಿ ಸ್ವಾಮಿ ಎಂದು ರೈತರು ಅಲುಬುತಿದ್ದಾರೆ ಎಂದು ಸುದ್ದಿಯಾಗಿರುತ್ತದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ. ಮಾನ್ವಿ**

## ವಿಜೃಂಭಣೆಯಿಂದ ಜರುಗಿದ ವಿಜಯನಗರ ಜಿಲ್ಲಾ ಸಾಹಿತ್ಯ ಸಮ್ಮೇಳನ





**ಸಿಹಿ ಕಹಿ ಸುದ್ದಿ**

**ಕೂಡ್ಲಿಗಿ :** ವಿಜಯನಗರ ಜಿಲ್ಲೆ ಸಾಹಿತ್ಯಕ್ಕೆ, ಕಲೆ, ಸಂಸ್ಕೃತಿ ಇತಿಹಾಸ ಪರಂಪರೆ, ಕನ್ನಡ ಸಾಹಿತ್ಯಕ್ಕೆ ವಿಜಯನಗರ ಜಿಲ್ಲಾ ಸಾಹಿತಿಗಳ ಕೊಡುಗೆ ಅಪಾರ, ಆದಿಕವಿ ಪಂಪ ರನ್ನರ ನಂಟು, ಹರಿಹರ ರಾಘವಾಂಕರು ಹಂಪಿಯಲ್ಲಿ ನೆಲೆ ನಿಂತು ಕಾವ್ಯಗಳನ್ನು ರಚಿಸಿದ್ದರು ಎಂದು ಇದೇ ಸಂದರ್ಭದಲ್ಲಿ ಸ್ಮರಿಸಿದರು. ವಿಜಯನಗರ ಸಾಮ್ರಾಜ್ಯದ ವೈಭವವನ್ನು ಮತ್ತು ಆಧುನಿಕ ಕಾಲಘಟ್ಟದ ಸಾಹಿತಿಗಳಾದ ಅಭಿನವ ಸರ್ವಜ್ಞರಿಂದ ಹೆಸರಾದ ರೇವರೆಂಡ್ ಉತ್ತಂಗಿ ಚನ್ನಪ್ಪನವರು, ಕರ್ನಾಟಕ ಏಕೀಕರಣದ ಹೋರಾಟಗಾರರ ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿಯವರು, ಕೋ ಚನ್ನಬಸಪ್ಪನವರು, ಬಳ್ಳಾರಿಯ ರಾಘವರು, ಹಾಸ್ಯಕವಿ ಬೀಚಿ, ಖ್ಯಾತ ಪತ್ರಕರ್ತರಾದ ರವಿ ಬೆಳಗೆರೆ, ಸೇರಿದಂತೆ ಅನೇಕ ಸಾಹಿತಿಗಳನ್ನು ಇದೇ ಸಂದರ್ಭದಲ್ಲಿ ವಿಜಯನಗರ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಮ್ಮೇಳನ ಅಧ್ಯಕ್ಷರಾದ ಎನ್.ಎಂ ರವಿಕುಮಾರ್ ಸ್ಮರಿಸಿದರು. ಕಾರ್ಯಕ್ರಮದ ಉದ್ಘಾಟಿಸಿ ಡಾ, ಕೆ ರವೀಂದ್ರನಾಥ ಮಾತನಾಡಿ ವಿಜಯನಗರ ಸಾಮ್ರಾಜ್ಯದಲ್ಲಿ ಆಸ್ಥಾನದ ಕವಿಗಳು ಪ್ರಾಚೀನ ಸಾಹಿತ್ಯ ಮಾತ್ರ ಬರೆಯಲಿಲ್ಲ ಬದಲಾಗಿ ಇತಿಹಾಸ ಕಟ್ಟಿ ಕೊಳ್ಳುವ ಪ್ರಯತ್ನ ಮಾಡಿ ಕಾವ್ಯ ಅಧ್ಯಯನ ಮೂಲಕ ತಿಳಿಸಬಹುದು ಎಂದರು.

ಲೇಖಕ ಭೀಮಣ್ಣ ಗಜಪುರ ಮಾತನಾಡಿ ಸಮ್ಮೇಳನ ಅಧ್ಯಕ್ಷರ ಕುರಿತು ಅಧ್ಯಕ್ಷರ ಸುದೀರ್ಘ ಜೀವನ ಅನುಭವವನ್ನು ತಿಳಿಸಿದರು. ಷ.ಬ್ರ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಡೊಣ್ಣೂರು ಚಾನು ಕೋಟಿ ಮಠ ಕೊಟ್ಟೂರು, ದಾ.ಮ. ಐಮಡಿ ಶರಣಾರ್ಯರು, ಸಾನಿಧ್ಯ ವಹಿಸಿದ್ದರು. ಚೇತನ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷರಾದ ಡಾ, ಚಂದ್ರಶೇಖರ ಮಾಡಲಗೇರಿ, ಹಿರಿಯ ಕವಿಗಳಾದಯು ಜಗನ್ನಾಥ್, ಸುವರ್ಣ ಕರ್ನಾಟಕ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಡಾ, ಜಿ ಶಿವಣ್ಣ, ಪ್ರೇಮ ಭಜಂತ್ರಿ, ಪುಷ್ಪ, ಕೂಡ್ಲಿಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವೀರೇಶ್ ಅಂಗಡಿ, ಜಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುಜಾತ, ಹಾಗೂ ದತ್ತಿ ದಾನಿಗಳಾದ ಸುಭಾಷ್ ಚಂದ್ರ ಇದ್ದರು. ನಂತರ ಕವಿ ಗೋಷ್ಠಿ ಅಧ್ಯಕ್ಷತೆಯನ್ನು ಸಾಹಿತಿ ಸುರೇಶ್ ಕೋರೆಕೊಪ್ಪ ಮಾತನಾಡಿ ಕನ್ನಡ ಉಳಿಸು ಬೆಳೆಸುವಂತಹ ಕೆಲಸ ನಾವು ನೀವೆಲ್ಲರೂ ಕಂಕಣ ಬದ್ಧರಾಗಿ ನಿಲ್ಲಬೇಕು. ಯುವ ಸಾಹಿತಿಗಳು ಕನ್ನಡ ನಾಡಿಗೆ ತನ್ನದೇ ರೂಪದಲ್ಲಿ ಹೊಸ ಲೇಖನಿಗಳನ್ನು ಕಾದಂಬರಿಗಳನ್ನು ಕವನ ಸಂಕಲನಗಳನ್ನು ಹೊರ ತರುವುದರ ಮೂಲಕ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡ ಬೇಕೆಂದು ಕವಿಗಳಿಗೆ ಕಿವಿಮಾತು ತಿಳಿಸಿದರು.

ದಿವ್ಯ ಸಾನಿಧ್ಯವನ್ನು ಷ,ಬ್ರ, ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿಗಳು ಮಾತನಾಡಿ ಇಂತಹ ಸಮ್ಮೇಳನಗಳು ಈ ನಾಡಿನಾದ್ಯಂತ ನಡೆಯಲಿ ಜೊತೆಗೆ ಈ ಕನ್ನಡ ನಾಡಿನ ಸಾಹಿತಿಗಳನ್ನು ಸ್ಮರಿಸಬೇಕು.

ಯುವ ಶಕ್ತಿಯಲ್ಲಿ ಸಾಹಿತ್ಯದ ಬಗ್ಗೆ ನಾಡು ನುಡಿ ಜಲ ಭಾಷೆಯ ಬಗ್ಗೆ ಸವಿವರವಾಗಿ ತಿಳಿಸಿದರು. ಅಂಜಲಿ ಬೆಳಗಲ್ ಮತ್ತು ಎ.ಕರಿಬಸಪ್ಪ ವಿಶೇಷ ಉಪನ್ಯಾಸ ನೀಡಿ-ದರು

ಇದೇ ಸಂದರ್ಭದಲ್ಲಿ ಚೇತನ ಫೌಂಡೇಶನ್ ನ ಸಂಸ್ಥಾಪಕ ಅಧ್ಯಕ್ಷರಾದ ಡಾ, ಚಂದ್ರಶೇಖರ್ ಮಡಲಗೇರಿ, ಸುರೇಶ್ ಕೋರೆಕೊಪ್ಪ, ಡಾ, ಜಿ.ಶಿವಣ್ಣ, ಲೇಖಕಿ ಅಂಜಲಿ ಬೆಳಗಲ್, ಡಾ, ಎ.ಕರಿಬಸಪ್ಪ, ಕೂಡ್ಲಿಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಅಂಗಡಿ ವೀರೇಶ್, ನಿವೃತ್ತ ಬಿ,ಡಿ,ಓ ಕೊಟ್ರಯ್ಯ ಕೂಡ್ಲಿಗಿ ತಾಲೂಕು ನಿಕಟ ಪೂರ್ವ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಎಸ್.ಎಮ್ ಗುರುಪ್ರಸಾದ್, ಹೋಬಳಿ ಘಟಕದ ಅಧ್ಯಕ್ಷರಾದ ತಿಪ್ಪೇಸ್ವಾಮಿ ಎನ್.ಎಸ್, ನಿವೃತ್ತಿ ಶಿಕ್ಷಕರಾದ ಚಂದ್ರಪ್ಪ, ದೇವಿರಮ್ಮ, ಸಣ್ಣ ವೀರಣ್ಣ, ರೈತ ಹೋರಾಟಗಾರ ಎನ್ ಬಸವರಾಜ್, ಡಾ, ಟಿ ಓಂಕಾರಪ್ಪ , ಪಿಎಂ ಸಿದ್ದಲಿಂಗ ಮೂರ್ತಿ ಪೂಜಾರಹಳ್ಳಿ, ಹನುಮಂತರಾಜು, ಸೇರಿದಂತೆ ರಾಜ್ಯ ಮಟ್ಟದ ಶ್ರೀ ಕೃಷ್ಣದೇವರಾಯ ಸೇವರತ್ನ ಪ್ರಶಸ್ತಿ ಪುರಸ್ಕೃತರು, ಕರುನಾಡ ಚೇತನ ಪ್ರಶಸ್ತಿ ಪುರಸ್ಕೃತರು, ಕನ್ನಡ ಸಾಹಿತ್ಯ ಪರಿಷತ್ತು ಎಲ್ಲಾ ತಾಲೂಕು ಘಟಕದ ಪದಾಧಿಕಾರಿಗಳು, ಶರಣ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ರೈತ ಮುಖಂಡರು, ಕನ್ನಡ ನಾಡು ನುಡಿ ಚಿಂತಕರು, ಬರಹಗಾರರು, ಸೇರಿದಂತೆ ಇತರರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ. ಹೊಸಹಳ್ಳಿ**

## ದಸರಾ ಸಾಂಸ್ಕೃತಿಕ ಉತ್ಸವಕ್ಕೆ ಅದ್ದೂರಿ ತೆರೆ

## ಬನಶಂಕರಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಅನುದಾನ: ಸಚಿವ ಶಿವಾನಂದ ಪಾಟೀಲ



**ಮಹಾಲಿಂಗಪುರ :** ಪಟ್ಟಣದ ಬನಶಂಕರಿದೇವಿ ದೇವಸ್ಥಾನದಲ್ಲಿ ನವರಾತ್ರಿ ನಿಮಿತ್ಯ ಒಂಭತ್ತು ದಿನಗಳವರೆಗೆ ನಡೆದ ಶ್ರೀದೇವಿ ಪುರಾಣ ಹಾಗೂ ದಸರಾ ಸಾಂಸ್ಕೃತಿಕ ಉತ್ಸವಕ್ಕೆ ಶನಿವಾರ ರಾತ್ರಿ ತೆರೆ ಬಿದ್ದಿತು.

ಜವಳಿ ಸಚಿವ ಶಿವಾನಂದ ಪಾಟೀಲ ದೇವಿ ದರ್ಶನ ಪಡೆದು ಮಾತನಾಡಿ, ಬನಶಂಕರಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸರ್ಕಾರದಿಂದ ಅನುದಾನ ಒದಗಿಸಲಾಗುವುದು. ಇತ್ತೀಚಿನ ದಿನಗಳಲ್ಲಿ ನೇಕಾರಿಕೆ ಉದ್ಯೋಗ ಕಷ್ಟಕರವಾಗಿದೆ. ಹೀಗಾಗಿ, ನೇಕಾರಿಕೆಯಲ್ಲಿ ಹೆಚ್ಚಿನ ತಂತ್ರಜ್ಞಾನ ಅಳವಡಿಸುವ ಕುರಿತು ಸರ್ಕಾರದ ಮಟ್ಟದಲ್ಲಿ ಚಿಂತನೆ ಮಾಡಲಾಗುತ್ತಿದೆ ಎಂದರು.

ನವರಾತ್ರಿ ಉತ್ಸವ ಅನೇಕ ದೃಷ್ಟಾಂತ ತಿಳಿಸಿಕೊಡುತ್ತದೆ. ದುಷ್ಟ ಶಕ್ತಿಗಳನ್ನು ಸಂಹಾರ ಮಾಡಲು ಭೂಮಿಯ ಮೇಲೆ ದೇವಿ ಅವತರಿಸಿದ ಅನೇಕ ಘಟನೆಗಳನ್ನು ಕೇಳಿದ್ದೇವೆ. ಇಡೀ ದೇಶದಲ್ಲಿ ಮಳೆ ಉತ್ತಮ ರೀತಿಯಲ್ಲಿ ಸುರಿದಿದ್ದರಿಂದ ನವರಾತ್ರಿಯನ್ನು ಸಂಭ್ರಮದಿಂದ ಆಚರಿಸುತ್ತಿದ್ದೇವೆ ಎಂದರು.

ನೇಕಾರರಿಗೆ ಜವಳಿ ಇಲಾಖೆಯಿಂದ ಜವಳಿ ವಸತಿ ಆಶ್ರಯ ಯೋಜನೆ ಪುನರ್ ಆರಂಭಿಸಲು ಜಾರಿಗೊಳಿಸಲು ಆಗ್ರಹಿಸಿ ಸೌಜನ್ಯ ಕೈಮಗ್ಗ ನೇಕಾರರ ಸಹಕಾರ ಸಂಘದ ಅಧ್ಯಕ್ಷ ಜಿ.ಎಸ್.ಗೊಂಬಿ ಜವಳಿ ಸಚಿವರಿಗೆ ಮನವಿ ಸಲ್ಲಿಸಿದರು.

ವಿಧಾನಪರಿಷತ್ ಸದಸ್ಯೆ ಉಮಾಶ್ರೀ ಮಾತನಾಡಿದರು. ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಡಾ.ಎ.ಆರ್.ಬೆಳಗಲಿ, ಪದ್ಮಜೀತ ನಾಡಗೌಡಪಾಟೀಲ, ಬಸವರಾಜ ರಾಯರ, ರಂಗನಗೌಡ ಪಾಟೀಲ, ಅಶೋಕ ಅಂಗಡಿ, ರಾಜೇಶ ಭಾವಿಕಟ್ಟಿ ಇದ್ದರು.

ಪ್ರವಚನ ಸಮಾರೋಪ: ಬೆಂಗಳೂರಿನ ಅನ್ನದಾನಿ ಸ್ವಾಮೀಜಿ ದೇವಿ ಪುರಾಣ ಪ್ರವಚನ ನೀಡಿ, ಶಿವನು ಸರ್ವಮಂಗಳೆಯ ಮಹಿಮೆಯನ್ನು ನಂದಿಗೆ ಹೇಳಿರುವ ಕುರಿತು ಹಾಗೂ ದೇವಿಯಲ್ಲಿ ಐಕ್ಯವಾಗುವ ಜೀವನ್ಮುಕ್ತಿಯ ವಿವರಗಳನ್ನು ಶಿವನು ನಂದೀಶ್ವರನಿಗೆ ಹೇಳಿರುವ ಕುರಿತು ವಿವರಿಸಿ ಶ್ರೀದೇವಿ ಪುರಾಣವನ್ನು ಸಮಾರೋಪಗೊಳಿಸಿದರು. ಶ್ರೀಕಾಂತ ನಾಯಿಕ ಹಾರ್ಮೋನಿಯಂ, ಹಣಮಂತ ಅಂಕದ ತಬಲಾ ಸಾಥ್ ನೀಡಿದರು. ಡಾ.ವಿಜಯ ಹಂಚಿನಾಳ ಕುಟುಂಬ, ಎಂ.ಎಂ.ನಿಂಬರಗಿ, ವೆಂಕನಗೌಡ ಪಾಟೀಲ ಹಾಗೂ ಪ್ರಸಾದ ದಾನಿಗಳನ್ನು ಸನ್ಮಾನಿಸಲಾಯಿತು. ಶೋಭಾ ಚಂದ್ರಶೇಖರ ಹುಣಶ್ಯಾಳ ಕುಟುಂಬದಿಂದ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

ಮನಸೆಳೆದ ಗಾಯನ: ಪುಟಾಣಿ ದಿಯಾ ಹೆಗಡೆ ಹಾಗೂ ಪ್ರಶಾಂತ ಅಂಬಿ ಪ್ರಸ್ತುತಪಡಿಸಿದ ಗಾಯನ ಮನಸೆಳೆಯಿತು. ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ಡಿವೈಎಸ್ಪಿ ಶಾಂತವೀರ ಈ. ಜೊತೆಯಲಿ ಜೊತೆ ಜೊತೆಯಲಿ ಹಾಡು ಹಾಡಿ ರಂಜಿಸಿದರು. ರನ್ನಬೆಳಗಲಿಯ ಢಪಳಾಪುರ ವಿದ್ಯಾವಿಹಾರ ಶಾಲೆ ಮಕ್ಕಳು ನೃತ್ಯ ಪ್ರದರ್ಶಿಸಿದರು.

**ಮೂಡಲಗಿ : ಮೂಡಲಗಿ ತಾಲೂಕ ಮಟ್ಟದ ಕ್ರೀಡಾಕೂಟದಲ್ಲಿ ಬಸವೇಶ್ವರ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಖಾನಟ್ಟಿಯ ಶಿವಲಿಂಗೇಶ್ವರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಕಾದಂಬರಿ ರಡೆರಟ್ಟಿ ಇವಳು ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ. ಈತಳಿಗೆ ನಮ್ಮ ಶಿಕ್ಷಣ ಸಂಸ್ಥೆಯ ಅಧ್ಯಕ್ಷರ ಪರವಾಗಿ ಸಿಬ್ಬಂದಿ ವರ್ಗದವರು ಪರವಾಗಿ ಊರಿನ ಗುರು ಹಿರಿಯರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.**



## ಮನೆ ಮನೆಗೆ ತೆರಳಿ ಬಿಜೆಪಿ ಸದಸ್ಯತಾ ಅಭಿಯಾನ



**ಬಾಗಲಕೋಟೆ :** ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪಕ್ಷಗಳಿಗೆ ಸದಸ್ಯತಾ ಅಭಿಯಾನ ಬಹಳ ಮುಖ್ಯವಾಗಿದ್ದು, ದೇಶ ಅಭಿವೃದ್ಧಿಗಾಗಿ ಬಿಜೆಪಿಯ ಸದಸ್ಯರಾಗುವ ಮೂಲಕ ಅಭಿಯಾನವನ್ನು ಯಶಸ್ವಿಗಳಿಸಿ ಎಂದು ಮಾಜಿ ಶಾಸಕರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ನವನಗರದ 20ನೇ ವಾರ್ಡಿನ ಬ185.186 ಮತ್ತು 187ನೇ ಬೂತಿನ 63-61 ನೇ ಸೆಕ್ಟರನಲ್ಲಿ ಬಿಜೆಪಿ ನಗರ ಮಂಡಲ ವತಿಯಿಂದ ಹಮ್ಮಿಕೊಂಡ ಬಿಜೆಪಿ ಸದಸ್ಯ ಅಭಿಯಾನದಲ್ಲಿ ಮನೆ ಮನೆ ತೆರಳಿ ಸದಸ್ಯತ್ವನ್ನು ನೊಂದಣಿ ಮಾಡಿ ಮಾತನಾಡಿದರು.

ದೇಶದ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪಕ್ಷಗಳ ಸಂಘಟನೆಯ ದೃಷ್ಟಿಯಿಂದ ಸದಸ್ಯತಾ ಅಭಿಯಾನ ಬಹುಮುಖ್ಯವಾಗಿದ್ದು, ದೇಶ ಅಭಿವೃದ್ಧಿ ದೃಷ್ಟಿಯಿಂದ ಬಿಜೆಪಿಯ ಸದಸ್ಯರಾಗಿ ಎಂದು ವಿನಂತಿಸಿದರು.

ಬಿಟಿಡಿಎ ಮಾಜಿ ಅಧ್ಯಕ್ಷ ಜಿ.ಎನ್.ಪಾಟೀಲ ಮಾತನಾಡಿ ನಮಗೆ ದೇಶದ ಅಭಿವೃದ್ಧಿ ಮುಖ್ಯವಾಗಿದ್ದು, ದೇಶದ ಅಭಿವೃದ್ಧಿ ಬಿಜೆಪಿ ಪಕ್ಷದಿಂದ ಮಾತ್ರ ಸಾಧ್ಯ ಆಗಾಗಿ ಬಿಜೆಪಿ ಸದಸ್ಯತಾ ಅಭಿಯಾನ ಯಶಸ್ವಿಗೊಳಿ ಎಂದರು. ಬೂತ ಅಧ್ಯಕ್ಷ ರೇಣುಕಾಚಾರ್ಯ ಹಿರೇಮಠ, ವಿಶ್ವನಾಥ ಪಾಟೀಲ, ವಾರ್ಡ ಅಧ್ಯಕ್ಷ ಜಿ.ಎಸ್.ಬಡಿಗೇರ, ಮಹಾಂತೇಶ ಬಾದೊಡಗಿ, ಪ್ರಭಾಕರ ದಡ್ಡೆನ್ನವರ, ಅಶೋಕ ನೂಲಿ, ಪಿ.ಡಿ.ಜತ್ತಿ. ಬಿ.ವಾಯ್. ಅನವಾಲ್.ಎ.ಜಿ.ಹಡಪದ.ನಾಗರಾಜ ಕಲಾಲ, ಪ್ರಭು ಹಡಗಲಿ, ಭಾಗೀರತಿ ಪಾಟೀಲ, ಲತಾ ನೀಲವಾಣಿ,ನಗರ ಸಭೆ ಸದಸ್ಯೆ ನಾಗರತ್ನ ಹೆಬ್ಬಳ್ಳಿ, ನಗರಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ಗಣೇಶ ಲಗಳಿ, ಚಂದ್ರು ಸರೂರ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಎಲ್ಲಾ ವಾರ್ಡಿನ ಪ್ರತಿ ಬೂತಗಳಿಗೂ ಬೇಟಿನೀಡಿ ಬೂತ್‌ಗಳ ಸದಸ್ಯತ ಅಭಿಯಾನದ ಅಂಕಿ ಅಂಶಗಳ ಸಂಪೂರ್ಣ ಮಾಹಿತಿಯನ್ನು ಪಡೆಯಲಾಯಿತು.

## ಬನಹಟ್ಟಿಯಿಂದ ಹುಬ್ಬಳ್ಳಿವರೆಗೆ ಪಾದಯಾತ್ರೆ

## ಕೆಎಚ್‌ಡಿಸಿ ನಿಗಮದ ಅವ್ಯವಹಾರ ಮರು ತನಿಖೆಯಾಗಲಿ: ಟಿರ್ಕಿ



**ಮಹಾಲಿಂಗಪುರ :** ಹಿಂದಿನ ಸರ್ಕಾರದ ಅವಧಿಯಲ್ಲಿ ಕೆಎಚ್‌ಡಿಸಿ ನಿಮಗದಲ್ಲಿ ನೂರಾರು ಕೋಟಿ ಅವ್ಯವಹಾರ ನಡೆದಿದ್ದು. ಇದರ ಸಂಪೂರ್ಣ ತನಿಖೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ರಾಜ್ಯಾಧ್ಯಕ್ಷ ಶಿವಲಿಂಗ ಟಿರ್ಕಿ ಹೇಳಿದರು.

ರಾಜ್ಯದ ವೃತ್ತಿಪರ ನೇಕಾರರ ಹಕ್ಕೊತ್ತಾಯಗಳ ಈಡೇರಿಕೆ ಹಾಗೂ ಕೆಎಚ್‌ಡಿಸಿ ನಿಗಮದ ನೂರಾರು ಕೋಟಿ ಹಗರಣದ ಮರು ತನಿಖೆಗೆ ಒತ್ತಾಯಿಸಿ ಬನಹಟ್ಟಿಯಿಂದ ಹುಬ್ಬಳ್ಳಿವರೆಗೆ ಹಮ್ಮಿಕೊಂಡ ಸ್ವಾಭಿಮಾನಿ ನೇಕಾರ ಪಾದಯಾತ್ರೆಯಲ್ಲಿ ಭಾಗವಹಿಸಿ, ಪಟ್ಟಣದ ಚನ್ನಮ್ಮ ವೃತ್ತ, ಗಾಂಧಿ ವೃತ್ತಗಳಲ್ಲಿ ಮಾಲಾರ್ಪಾಣೆ ಮಾಡಿ ಮಾತನಾಡಿದ ಅವರು ಪಾದಯಾತ್ರೆಯ ಪ್ರಥಮ ದಿನ ಬನಹಟ್ಟಿಯಿಂದ ಮೂಡಲಗಿ ಹೋಗುವಾಗ ಪಟ್ಟಣದಲ್ಲಿ ನೇಕಾರರನ್ನು ಉದ್ದೇಶಿಸಿ ಮಾತನಾಡಿದ ಅವರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನೇಕಾರಿಕೆಯನ್ನು ಉಳಿಸಲು ಕಟ್ಟಡ ಕಾರ್ಮಿಕರ ಮಾದರಿಯಲ್ಲಿ ವೃತ್ತಿಪರ ನೇಕಾರರಿಗೆ ಕಾರ್ಮಿಕ ಸೌಲಭ್ಯಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಮುಖ್ಯವಾಗಿ ಹಿಂದಿನ ಸರ್ಕಾರದ ಅವಧಿಯಲ್ಲಿ ಕೆಎಚ್‌ಡಿಸಿ ನಿಗಮದಲ್ಲಿ ನಡೆದ ಅವ್ಯವಹಾರದ ಮರು ತನಿಖೆಯಾಗಬೇಕು. ಕೇವಲ ಅಧಿಕಾರಿಗಳಿಗೆ ಶಿಕ್ಷೆಯಾದರೆ ಸಾಲದು, ಅದರಲ್ಲಿ ಭಾಗಿಯಾದ ಜನಪ್ರತಿನಿಧಿಗಳಿಗೂ ಕಠಿಣ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದ ಅವರು ನಮ್ಮ ಸ್ವಾಭಿಮಾನಿ ಪಾದಯಾತ್ರೆಯು ಅ.13ರಂದು ಬನಹಟ್ಟಿಯಿಂದ ಪ್ರಾರಂಭವಾಗಿದೆ. ಮೂಡಲಗಿ, ಗೋಕಾಕ, ಯಮಕನಮರಡಿ, ಬೆಳಗಾವಿ, ಕಿತ್ತೂರ, ಧಾರವಾಡ ಮಾರ್ಗವಾಗಿ ಅ.19ರಂದು ಹುಬ್ಬಳ್ಳಿ ಕೆಎಚ್‌ಡಿಸಿ ಪ್ರಧಾನ ಕಛೇರಿ ಮುಂದೆ ಧರಣಿ ನಡೆಸಲಾಗುವದು ಎಂದರು. ಹುಬ್ಬಳ್ಳಿಯ ಧರಣಿಯಲ್ಲಿ ಮಹಾರಾಷ್ಟ್ರ ಹಾಗೂ ಕರ್ನಾಟಕದ ವಿವಿಧ ಭಾಗಗಳ ವೃತ್ತಿನೇಕಾರರು ಸೇರಿ ಲಕ್ಷಕ್ಕೂ ಅಧಿಕ ಜನರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ ಎಂದರು.


ಪಾದಯಾತ್ರಿಕರಿಗೆ ಭವ್ಯ ಸ್ವಾಗತ : ಬನಹಟ್ಟಿಯಿಂದ ಪಾದಯಾತ್ರೆಯಲ್ಲಿ ಆಗಮಿಸಿದ ನೇಕಾರರಿಗೆ ಸ್ಥಳೀಯ ನೇಕಾರರು ರಬಕವಿ ರಸ್ತೆಯ ದ್ವಾರಬಾಗಿಲು ಬಳಿ ಭವ್ಯ ಸ್ವಾಗತ ಕೋರಿ, ಚನ್ನಮ್ಮ ವೃತ್ತ, ಗಾಂಧಿ ವೃತ್ತ, ಬುದ್ನಿಪಿಡಿ, ಗೋಕಾಕ ರಸ್ತೆಯ ಮಹಾದ್ವಾರವರೆಗೆ ಪಾದಯಾತ್ರೆಯಲ್ಲಿ ಭಾಗವಹಿಸಿ ಹೋರಾಟಕ್ಕೆ ಬೆಂಬಲ ನೀಡಿದರು.

ರಾಜೇಂದ್ರ ಮಿರ್ಜಿ, ಚೇತನ ಹುಣಶ್ಯಾಳ, ಪ್ರಕಾಶ ಮರೆಗುದ್ದಿ, ಸಿದ್ದು ಶಿರೋಳ, ಸೋಮು ಮರೆಗುದ್ದಿ, ಸದಾಶಿವ ಬರಗಿ, ಮಹಾಂತೇಶ ಜಿಡ್ಡಿಮನಿ, ಮಹಾದೇವ ಅಥಣಿ, ಸಂಗಪ್ಪ ಹಳ್ಳೂರ, ರಾಜು ಕುಕ್ಕುಗೋಳ, ರಾಜು ಬೆಳಗಲಿ, ಎಸ್.ಎಸ್.ಮಠದ, ರಮೇಶ ನಾಗರಾಳ, ಶ್ರೀಶೈಲ ಮುಗಳೋಳ್ಳಿ, ಮಲ್ಲಪ್ಪ ಮಿರ್ಜಿ, ಉಮೇಶ ಬದಾಮಿ, ಗುರಪ್ಪ ಪಂಕಿ, ಮಹಾಲಿಂಗ ಹುಣಶ್ಯಾಳ, ಈರಪ್ಪ ಮುದಕವಿ, ರಾಜು ಯಾದವಾಡ, ಶ್ರೀಕಾಂತ ಜಗದಾಳ, ಬಸು ಗೋಲಭಾಂವಿ, ಈರಪ್ಪ ಢವಳೇಶ್ವರ ಸೇರಿದಂತೆ ಹಲವರು ಇದ್ದರು.

## ಚಡಚಣ ಬ್ಲಾಕ ಕಾಂಗ್ರೆಸ್ ಬಿದಿ ಬದಿ ವ್ಯಾಪಾರಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ನೇಮಕಾತಿ

**ಝಳಕಿ :** ನಾಗಠಾಣ ಮತಕ್ಷೇತ್ರದ ಶಾಸಕರಾದ ವಿಠ್ಠಲ ಕಟಕದೊಂಡ ಚಡಚಣ ಬ್ಲಾಕ್ ಕ್ರಾಂಗೆಸ್ ಸಮಿತಿಯ ಬೀದಿ ಬದಿಯ ಅಧ್ಯಕ್ಷ ಅಮೀರ ನದಾಫ್ ಮತ್ತು ಉಪಾಧ್ಯಕ್ಷರ ಸೈಪಾನ ನದಾಫ್ ಇವರನ್ನು ಆಯ್ಕೆ ಮಾಡಿ ಆದೇಶ ಪತ್ರ ವಿತರಿಸಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಚಡಚಣ ಕಾಂಗ್ರೆಸ್ ಬ್ಲಾಕ ಅಧ್ಯಕ್ಷರು ಆರ್.ಡಿ.ಹಕ್ಕಿ, ಶಶಿಕಾಂತ್ ಸಾತಾಲಗಾಂವ್, ಇನ್ನುಸ ನದಾಫ್, ಶಕೀಲ್ ಶಿರಪನಳ್ಳಿ , ಮುಜೆಬ ಸೌದಾಗಾರ, ರುದ್ರಪ್ಪ ಸೊನ್ಯಾಳ, ಅಶೋಕ್ ಶಂಕು, ಧರೆಪ್ಪ ಕೋಳಿ, ಸಾರಿಕಾ ಬರುದ, ಹಾಗೂ ಬೀದಿ ಬದಿಯ ಎಲ್ಲಾ ವ್ಯಾಪಾರಸ್ಥರು ಉಪಸ್ಥಿತರಿದ್ದರು.



# ಕಿತ್ತೂರು ಜ್ಯೋತಿ ರಥ ಯಾತ್ರೆಗೆ ಅದ್ದೂರಿ ಸ್ವಾಗತ



**ಬಾಗಲಕೋಟೆ :** ಕಿತ್ತೂರ ಉತ್ಸವ-2024ರ ಅಂಗವಾಗಿ ರಾಜ್ಯಾದ್ಯಂತ ಸಂಚರಿಸುತ್ತಿರುವ ಕಿತ್ತೂರು ಜ್ಯೋತಿ ರಥ ಯಾತ್ರೆ ಮಂಗಳವಾರ ಬಾಗಲಕೋಟೆಗೆ ಆಗಮಿಸಿದ್ದು, ಜಿಲ್ಲಾಡಳಿತದಿಂದ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಜಿಲ್ಲಾಡಳಿತಕ್ಕೆ ಆಗಮಿಸುತ್ತಿದ್ದಂತೆ ವಿವಿಧ ಜಾನಪದ ಕಲಾತಂಡಗಳಿಂದ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ ಕಿತ್ತೂರು ಚನ್ನಮ್ಮ ಪುತ್ಥಳಿಗೆ ಹೂ ಮಾಲಾರ್ಪಣೆ ಮಾಡಿ ನಂತರ ಜ್ಯೋತಿ ಬೆಳಗಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ತಹಶೀಲ್ದಾರ ಅಮರೇಶ ಪಮ್ಮಾರ, ಸಮುದಾಯ ಮುಖಂಡರಾದ ರವಿ ಪಟ್ಟಣದ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮುದಾಯ ಬಾಂದವರು ಉಪಸ್ಥಿತರಿದ್ದರು.

# ಅಂಗನವಾಡಿ ಕಾರ್ಯಕರ್ತೆ, ಸಹಾಯಕರ ಹುದ್ದೆಗೆ ಅರ್ಜಿ

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲೆಯ ಬೀಳಗಿ, ಬಾದಾಮಿ, ಹುನಗುಂದ, ಜಮಖಂಡಿ, ಮುಧೋಳ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿನ ವಿವಿಧ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಖಾಲಿ ಇರುವ ಒಟ್ಟು 106 ಅಂಗನವಾಡಿ ಕಾರ್ಯಕರ್ತೆ ಹಾಗೂ 471 ಅಂಗನವಾಡಿ ಸಹಾಯಕಿಯರನ್ನು ಗೌರವ ಸೇವೆ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನ ನವೆಂಬರ 15 ಸಂಜೆ 5.30 ಆಗಿದ್ದು, ಹುದ್ದೆಗಳು ಖಾಲಿ ಇರುವ ವಿವರ ಹಾಗೂ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶನಾಲಯದ ಜಾಲತಾಣ http://dwcd.karnataka.gov.in ದಲ್ಲಿ ಆನ್‌ಲೈನ್ ಸೇವೆಗಳ ಟ್ಯಾಬ್‌ನಲ್ಲಿ ಕಾರ್ಯಕರ್ತೆ, ಸಹಾಯಕಿಯರ ಆನ್‌ಲೈನ್ ನೇಮಕಾತಿಯ ಸಬ್ ಟ್ಯಾಬ್‌ನಲ್ಲಿ ಕ್ಲಿಕ್ ಮಾಡುವ ಮೂಲಕ ಅರ್ಜಿ ಸಲ್ಲಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಬೀಳಗಿ (08425-275321), ಹುನಗುಂದ (08351-295080), ಬಾದಾಮಿ (08357-221211), ಜಮಖಂಡಿ (08353-220265), ಮುಧೋಳ (08350-280162) ಗೆ ಸಂಪರ್ಕಿಸಬಹುದಾಗಿದೆ.



**ರಬಕವಿ-ಬನಹಟ್ಟಿ ನಗರ ಯೋಜನಾ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹೊಸೂರಿನ ವೆಂಕನಗೌಡ ಚಂದ್ರಶೇಖರ ಪಾಟೀಲರನ್ನು ರಬಕವಿಯ ಗೆಳೆಯರ ಬಳಗದ ಸಂಜಯ ತೇಲಿ, ಸಂಜಯ ತೆಗ್ಗಿ, ರವಿ ಗಡಾದ, ಡಾ.ರವಿ ಜಮಖಂಡಿ, ಮಹಾದೇವ ದುಪದಾಳ, ಇಂದ್ರು ಲಾಳಕೆ ಮತ್ತಿತರರು ಸನ್ಮಾನಿಸಿ ಗೌರವಿಸಿದರು.**

# ಕಬ್ಬು ಬೆಳೆಗಾರರು & ಮುಖಂಡರ ಜೊತೆ ಸಭೆ

# ರೈತನ ಬಾಕಿ ಪಾವತಿಗೆ ಗುಡುವು: ಡಿಸಿ ಜಾನಕಿ



**ಬಾಗಲಕೋಟೆ :** ಸಕ್ಕರೆ ಕಾರ್ಖಾನೆಯವರು ಪ್ರತಿ ಟನ್‌ಗೆ ಹೆಚ್ಚುವರಿಯಾಗಿ ಘೋಷಿಸಿದ ಮೊತ್ತದ ಬಾಕಿ ಹಣವನ್ನು ಅಕ್ಟೋಬರ 20 ರೊಳಗಾಗಿ ಪಾವತಿಸುವಂತೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಗಡುವು ನೀಡಿದರು.

ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಮಂಗಳವಾರ ಕಬ್ಬು ಬೆಳೆಗಾರರು ಹಾಗೂ ಮುಖಂಡರ ಜೊತೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಎಫ್.ಆರ್.ಪಿ ಪ್ರಕಾರ ಜಿಲ್ಲೆಯ ಎಲ್ಲ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ಹಣವನ್ನು ಪಾವತಿಸಿದ್ದಾರೆ. ಆದರೆ ಹೆಚ್ಚುವರಿ ಘೋಷಿಸಿದ ಮೊತ್ತವನ್ನು ಪಾವತಿಸಲು ಬಾಕಿ ಉಳಿಸಿಕೊಂಡಿದ್ದು, ರೈತರ ಮನವಿ ಹಿನ್ನಲೆಯಲ್ಲಿ ಅಕ್ಟೋಬರ 20 ರೊಳಗಾಗಿ ಪಾವತಿಸಿಲು ಗುಡುವು ನೀಡಲಾಗಿದೆ ಎಂದು ತಿಳಿಸಿದರು.

ರೈತರು ಹಾಗೂ ರೈತ ಮುಖಂಡರ ಸಮಸ್ಯೆಗಳನ್ನು ಆಲಿಸಿದ ಜಿಲ್ಲಾಧಿಕಾರಿಗಳು ಕಳೆದ 2018-19ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಘೋಷಿಸಿದ ಪ್ರತಿ ಟನ್‌ಗೆ 175 ರೂ.ಗಳಂತೆ ಪಾವತಿಸಬೇಕಾದ ಮೊತ್ತ ಬಾಕಿ ಉಳಿದಿರುತ್ತದೆ. ಅದರಂತೆ 2020-21ನೇ ಸಾಲಿನಲ್ಲಿ 145 ರೂ.ಗಳ ಒಟ್ಟು 6 ಕೋಟಿ ರೂ, 2022-23ನೇ ಸಾಲಿನಲ್ಲಿ ಕಾರ್ಖಾನೆ ಪ್ರಾರಂಭಿಸುವ ಮುನ್ನ ಹಿಂದಿನ ಸಾಲಿನ 2021-22ನೇ ಹೆಚ್ಚುವರಿಯಾಗಿ 62 ರೂ.ಗಳ ನೀಡುವುದಾಗಿ ತಿಳಿಸಿದ್ದರು. ಆದರೆ ಕೇವಲ ಒಂದು ಕಾರ್ಖಾನೆಯವರು ಮಾತ್ರ ಮೊತ್ತ ಪಾವತಿಸಿದ್ದು, ಉಳಿದ ಕಾರ್ಖಾನೆಗಳು ಮೊತ್ತ ಪಾವತಿಗೆ ರೈತರು ಪಟ್ಟು ಹಿಡಿದರು.

ಸರಕಾರದ ನಿರ್ದೇಶನದಂತೆ ಜಿಲ್ಲೆಯಲ್ಲಿರುವ 13 ಸಕ್ಕರೆ ಕಾರ್ಖಾನೆಗಳ ಪೈಕಿ 7 ಕಾರ್ಖಾನೆಗಳು ಡಿಜಿಟಲ್ ತೂಕದ ಯಂತ್ರವನ್ನು ಒಳವಡಿಸಿದ್ದು, ಇನ್ನು 6 ಕಾರ್ಖಾನೆಯವರು ಡಿಜಿಟಲ್ ಯಂತ್ರ ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. ಕಾರ್ಖಾನೆಗೆ ಕಬ್ಬು ಪೂರೈಸಿದ ರೈತರಿಗೆ 14 ದಿನಗಳ ಒಳಗಾಗಿ ಬಿಲ್ ಪಾವತಿಸಬೇಕು. ತಪ್ಪಿದಲ್ಲಿ ಶೇ.15ರ ಬಡ್ಡಿ ಸಮೇತ ಬಿಲ್ ಪಾವತಿಸಬೇಕಾಗುತ್ತದೆ ಎಂದು ಕಟ್ಟುನಿಟ್ಟಿನ ಸೂಚನೆ ನೀಡುವುದಾಗಿ ತಿಳಿಸಿದರು. ಪ್ರತಿ ಸಕ್ಕರೆ ಕಾರ್ಖಾನೆಯವರು ಏಕರೂಪದ ದರ ನಿಗದಿಪಡಿಸಬೇಕು. ಈ ಕುರಿತು ಕಾರ್ಖಾನೆಯಿಂದ ಸ್ಪಷ್ಟ ಮಾಹಿತಿ ಪಡೆದುಕೊಳ್ಳಲಾಗುವುದು. ತೂಕದಲ್ಲಿ ಕಾರ್ಖಾನೆಯಿಂದ ಮೋಸ ಆಗದಂತೆ ಸೂಕ್ತ ಕ್ರಮವಹಿಸಲಾಗುವುದು. ಮೋಸ ಮಾಡುತ್ತಿರುವ ಬಗ್ಗೆ ರೈತರ ಗಮನಕ್ಕೆ ಬಂದಲ್ಲಿ ತಕ್ಷಣ ನಮಗೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿಗಳು ಹೇಳಿದರು.

ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಮಾತನಾಡಿ ಸರಕಾರದ ನಿಯಮಾವಳಿ ಪ್ರಕಾರ ಸಕ್ಕರೆ ಕಾರ್ಖಾನೆಗಳಿಗೆ ಬಾಕಿ ಪಾವತಿಗೆ ಕ್ರಮವಹಿಸಲಾಗುತ್ತದೆ. ರೈತರ ಪರವಾಗಿ ಜಿಲ್ಲಾಡಳಿತ ಇದ್ದು, ಬಾಕಿ ಪಾವತಿಗೆ ನೂರಕ್ಕೆ ನೂರರಷ್ಟು ಕ್ರಮವಹಿಸಲಾಗುವುದೆಂದು ತಿಳಿಸಿದರು. ಸಕ್ಕರೆ ಕಾರ್ಖಾನೆಗಳು ದರ ನಿಗದಿಪಡಿಸುವುದೊಂದು ಪಾವತಿಸುವುದು ಒಂದು ಆಗುತ್ತಿದೆ. ತಾರತಮ್ಯ ನೀತಿಯನ್ನು ಕಾರ್ಖಾನೆಗಳು ಅನುಸರಿಸುತ್ತಿರುವುದಾಗಿ ರೈತರು ಸಭೆಗೆ ತಿಳಿಸಿದಾಗ ಈ ಬಗ್ಗೆ ಕ್ರಮವಹಿಸಲಾಗುವುದೆಂದು ತಿಳಿಸಿದರು.

ಸಕ್ಕರೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಕ್ಕರೆ ಆಯುಕ್ತರೊಂದಿಗೆ ರೈತರು ಮತ್ತು ಕಾರ್ಖಾನೆ ಮಾಲಿಕರ ಜೊತೆ ಸಭೆ ಜರುಗಿಸುವಂತೆ ಸಭೆಯಲ್ಲಿ ರೈತರು ಹಾಗೂ ರೈತ ಮುಖಂಡರು ಮನವಿ ಮಾಡಿಕೊಂಡರು.

ಸಭೆಯಲ್ಲಿ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಆಹಾರ ಇಲಾಖೆ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಉಪವಿಭಾಗಾಧಿಕಾರಿಗಳಾದ ಸಂತೋಷ ಜಗಲಾಸರ, ಶ್ವೇತಾ ಬೀಡಿಕರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಎನ್.ಎಸ್.ಎಸ್. ಸಮಾರೋಪ ಸಮಾರಂಭ ಯಶಸ್ವಿ

**ಬಾದಾಮಿ :** ಸೇವಾ ಮನೋಭಾವನೆಯನ್ನು ಮೈಗೂಡಿಸಿಕೊಂಡು ರಾಷ್ಟ್ರ ಸೇವೆ ಮಾಡುವ ಪುಣ್ಯದ ಕೆಲಸ ಮತ್ತೊಂದಿಲ್ಲ ಎಲ್ಲರೊಂದಿಗೆ ಬೆರೆತು ಸಹಬಾಳ್ವೆಯನ್ನು ಮಾಡುವುದೇ ನಿಜವಾದ ಜೀವನ ಎಂದು ಎಸ್.ವಿ.ಪಿ ಸಂಸ್ಥೆಯ ಗೌರವ ಕಾರ್ಯದರ್ಶಿ ಎಸ್.ಡಿ ಫತ್ತೇಪೂರ ಹೇಳಿದರು



ಅವರು ತಾಲೂಕಿನ ಕೆಂದೂರ ಗ್ರಾಮದಲ್ಲಿ ಎಸ್.ಜಿ.ಎಂ.ಕೆ ಪದವಿ ಪೂರ್ವ ಮಹಾವಿದ್ಯಾಲಯ ಹಮ್ಮಿಕೊಂಡಿದ್ದ ಎನ್.ಎಸ್.ಎಸ್ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಪ್ರಾಚಾರ್ಯ ಪ್ರಭು ಎಸ್ ಜವಳಿ ಮಾತನಾಡಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ನಿಮ್ಮ ಗ್ರಾಮಕ್ಕೆ ಬಂದು ಹಲವಾರು ಸಮಾಜಿಕ ಕಾರ್ಯ ಮಾಡಿದ್ದಾರೆ ಅವರಿಗೆ ನೀವು ಕೊಟ್ಟ ಸಹಾಯ ಸಹಕರಕ್ಕೆ ಕೃತಜ್ಞತೆಗಳು ಎಂದರು, ಉಪನ್ಯಾಸಕಿ ಪಾರ್ವತಿ ಲೆಂಕೆನ್ನವರ ಪತ್ರಕರ್ತ ಹಾಗೂ ಉಪನ್ಯಾಸಕ ಬಸವರಾಜ್ ಉಳ್ಳಾಗಡ್ಡಿ ಎನ್.ಎಸ್.ಎಸ್ ಮಹತ್ವವನ್ನು ತಿಳಿಸಿದರು

ಕಾರ್ಯಕ್ರಮದ ಅಧಿಕಾರಿ ಜಿ.ಸಿ ತುಪ್ಪದ, ಆನಂದ ನಾಡಗೌಡ್ರ, ಪತ್ರಿಮರದ, ಚರಣ, ಸುರೇಶ ಮನಗೂಳಿ, ಹಾ.ಉ.ಸ.ಸ. ಕಾರ್ಯದರ್ಶಿ ಕೆಂಚಪ್ಪ ಹಾದಿಮನಿ, ಸಿದ್ದಾರೂಡ ಹಡ್ಲಿ, ಮಹಾಗುಂಡಪ್ಪ ಗುಡದಾರ, ಅಂತರಾಷ್ಟ್ರೀಯ ಕ್ರೀಡಾಪಟು ಸಿದ್ದಾರೂಡ ಕೊಪ್ಪದ ಇದ್ದರು, ಸವಿತಾ ಬೆಳಗನ್ನವರ ಕಾರ್ಯಕ್ರಮವನ್ನು ನಿರೂಪಿಸಿದರು.

ಎನ್.ಎಸ್.ಎಸ್ ಸ್ವಯಂಸೇವಕರಿಗೆ ನೆನಪಿನ ಕಾಣಿಕೆ ಪ್ರಶಸ್ತಿ ಮತ್ತು ನೋಟ್ ಬುಕ್ ಪೆನ್ ವಿತರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಧ್ಯಾನಶೀಲ ಮನಸ್ಸಿನ ಅಭಿವ್ಯಕ್ತಿ ಗೀತ ಗಾಂಧಾರ

**ರಬಕವಿ :** ಲಯವಿಲ್ಲವಾದರೆ ಕಾವ್ಯವಿಲ್ಲ. ಈ ಪ್ರಕೃತಿಯ ತುಂಬ ಲಯವಿದೆ. ಲಯ ತಪ್ಪಿದರೆ ಪ್ರಲಯ. ಛಂದಸ್ಸನ್ನ ಮೀರಿದ್ದು ಲಯ. ಅದ್ಭುತವಾದ ಕಾವ್ಯ ಕೃತಿ, ಧ್ಯಾನಶೀಲ ಮನಸ್ಸಿನ ಅಭಿವ್ಯಕ್ತಿ ಗೀತ ಗಾಂಧಾರ ಆಗಿದೆ ಎಂದು ಹಿರಿಯ ಸಾಹಿತಿ ಜಿ. ಎಸ್. ವಡಗಾಂವಿ ಹೇಳಿದರು

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ತಾಲೂಕಾ ಘಟಕ ರಬಕವಿ ಬನಹಟ್ಟಿ, ವಲಯಗಳು ತೇರದಾಳ, ಮಹಾಲಿಂಗಪುರ ಇವರ ಸಂಯುಕ್ತಾಶ್ರಯದಲ್ಲಿ ರಬಕವಿಯ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಪುಸ್ತಕಾವಲೋಕನ-34 ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಸಿದ್ಧರಾಜ ಪೂಜಾರಿಯವರ ಗೀತ ಗಾಂಧಾರ ಕೃತಿಯನ್ನು ಅವಲೋಕಿಸಿ ಮಾತನಾಡಿದ ಅವರು ನವ್ಯ ಕಾಲ ಘಟ್ಟದಲ್ಲಿ ಗೀತ ಗಾಂಧಾರ ಪ್ರಕಟವಾಗಿದೆ. ಕವಿ ಪ್ರತಿಮೆ ಮೂಲಕ, ರೂಪಕಗಳ ಮೂಲಕ ಕಾವ್ಯ ಹೆಣೆದಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾವ್ಯ ಕೌಸ್ತುಭ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಕೃತಿಕಾರ ಸಿದ್ಧರಾಜ ಪೂಜಾರಿ ಮಾತನಾಡಿ, ಕಾವ್ಯವೆಂದರೆ ಶಾಸ್ತ್ರ ಛಂದಸ್ಸು, ಪಾಂಡಿತ್ಯವಲ್ಲ. ಶಾಸ್ತ್ರ ಕಲೆಯಾಗಿ



ಕಾವ್ಯವಾಗಿ ಹೊರಹೊಮ್ಮಬೇಕು. ಭಾಷೆಗೆ ತನ್ನದೇಯಾದ ಲಯವಿದೆ. ಕಾವ್ಯಕ್ಕೆ ಏಕತಾನತೆ ಬರಬಾರದು. ಕಾವ್ಯ ಗುಣ ನಾಶವಾಗಬಾರದು ಎಂದರು.

ಸಮಾರಂಭದಲ್ಲಿ ಪ್ಲ್ಯಾಟಿನಂ ಪ್ರಶಸ್ತಿ ಪುರಸ್ಕೃತ ತಂತ್ರಜ್ಞಾನ ಅಭಿಯಂತರರಾದ ಇಂಗ್ಲೆಂಡ್ನಿಂದ ಆಗಮಿಸಿದ್ದ ಚಿನ್ಮಯ ಶಶಿಧರ ಪೂಜಾರಿ ಅವರಿಗೆ, ಶಶಿಧರ ಪೂಜಾರಿ ದಂಪತಿಗಳಿಗೆ ಗೌರವ ಸನ್ಮಾನ ನೀಡಲಾಯಿತು.

ಕಸಾಪ ರಬಕವಿ-ಬನಹಟ್ಟಿ ತಾಲೂಕು ಅಧ್ಯಕ್ಷ ಮ. ಕೃ. ಮೇಗಾಡಿ ಪ್ರಾಸ್ತಾವಿಕವಾಗಿ ಮಾತನಾಡಿ ಕಸಾಪ ಕಾರ್ಯಚಟುವಟಿಕೆಗಳಿಗೆ ಸದಾ ಸ್ಪಂದನೆ ಸಹಕಾರ ಪ್ರೋತ್ಸಾಹ ದೊರೆಯುತ್ತಿರುವುದು ನಿರಂತರ ಕಾರ್ಯಕ್ರಮ ಆಯೋಜಿಸಲು ಸಹಕಾರಿಯಾಗಿದೆ ಎಂದರು. ಹಿರಿಯ ಕಲಾವಿದ ಮಲ್ಲಪ್ಪ ಗಣಿ ಪ್ರಾರ್ಥಿಸಿದರು. ತೇರದಾಳ ವಲಯ ಅಧ್ಯಕ್ಷ ಗಂಗಾಧರ ಮೋಪಗಾರ ಸ್ವಾಗತಿಸಿದರು. ಚಂದ್ರಕಾಂತ ಹೊಸೂರ ನಿರೂಪಿಸಿದರು. ದಾನಪ್ಪ ಆಸಂಗಿ ವಂದಿಸಿದರು.

ಪ್ರೊ. ಎಂ. ಎಸ್. ಬದಾಮಿ, ಪ್ರೊ. ಮಲ್ಲಿಕಾರ್ಜುನ ಹುಲಗಬಾಳಿ, ಶಿವಾನಂದ ಬಾಗಲಕೋಟಮಠ, ಮಲ್ಲಿಕಾರ್ಜುನ ತುಂಗಳ, ಶರತ್ ಜಂಬಗಿ, ಮಲ್ಲೇಶಪ್ಪ ಕುಚನೂರ, ಗೌರಿ ಮಿಳ್ಳಿ, ಸುವರ್ಣಾ ಕೊಪ್ಪದ, ದಾಕ್ಷಾಯಣಿ ಮಂಡಿ, ಶಕುಂತಲಾ ತೇರದಾಳ, ಡಾ. ಬಿ. ಎನ್. ಬಾಗಲಕೋಟ, ಮಹಾದೇವ ಕವಿಶೆಟ್ಟಿ, ಸುರೇಶ ಪಟ್ಟಣಶೆಟ್ಟಿ, ಬಿ. ಎಮ್. ಮಟ್ಟಿಕಲ್ಲಿ, ಡಾ. ಡಿ. ಎ. ಬಾಗಲಕೋಟ, ಶಿವಾನಂದ ದಾಶ್ಯಾಳ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



**ರಬಕವಿ-ರಾಮಪೂರದ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಪಿಯೂ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಸ್ವಾತಿ ಮಲ್ಲಿಕಾರ್ಜುನ ಮುಳವಾಡ ರಾಜ್ಯಮಟ್ಟದ ಜೂಡೋ ಕ್ರೀಡೆಯಲ್ಲಿ ಪ್ರಥಮಳಾಗಿ ಸಾಧನೆ ಮೆರೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಸಾಧಕ ವಿದ್ಯಾರ್ಥಿನಿಗೆ ಸಂಸ್ಥೆಯ ಆಡಳಿತ ಮಂಡಳಿ, ಬೋಧಕ/ ಬೋಧಕೇತರ ವರ್ಗ ಅಭಿನಂದಿಸಿದ್ದಾರೆ.**

**ಲೋಕೋಪಯೋಗಿ ಇಲಾಖೆಯಿಂದ ಅವೈಜ್ಞಾನಿಕ ಕಾಮಗಾರಿ**

# ಕುಸಿದ ರಸ್ತೆ, ಆತಂಕದಲಿ ಸವಾರರು, ರೈತರು

**ತೇರದಾಳ :** ಪಟ್ಟಣದ ಹಿಡಕಲ್ ರಸ್ತೆಯ ಗೂಳಪ್ಪ ನಂದಗಾಂವ ತೋಟದ ವಸತಿ ಹತ್ತಿರ ಲೋಕೋಪಯೋಗಿ ಇಲಾಖೆ ಹಳ್ಳ ಹೂಳೆತ್ತುವ ಹಾಗೂ ಪಿಂಚಿಂಗ್ ಕಾಮಗಾರಿಯನ್ನು ಅವೈಜ್ಞಾನಿಕವಾಗಿ ನಿರ್ಮಿಸಿದ್ದರಿಂದ ಡಾಂಬರ ರಸ್ತೆ ಎರಡು ಅಡಿ ಆಳವಾಗಿ ಮತ್ತು 30 ಮೀಟರನಷ್ಟು ಉದ್ದ ಕುಸಿದಿದೆ. ಇದರಿಂದ ವಾಹನಗಳ ಸವಾರರು ಹಾಗೂ ಅಕ್ಕ-ಪಕ್ಕದ ರೈತರು ಆತಂಕಕ್ಕೆ ಒಳಗಾಗಿದ್ದಾರೆ.

ರೈತರ ಬಹುದಿನಗಳ ಬೇಡಿಕೆಯಾಗಿದ್ದ ಹಳ್ಳ ಹೂಳೆತ್ತುವ ಹಾಗೂ ಪಿಚಿಂಗ್ ಕಾಮಗಾರಿಗೆ ಸುಮಾರು ವರ್ಷಗಳ ಹಿಂದೆ ಲೋಕೋಪಯೋಗಿಇಲಾಖೆಯಡಿಸರಕಾರ ಅನುದಾನ ಒದಗಿಸಿತ್ತು. ಕಾಮಗಾರಿಯನ್ನು ಸಾಕಷ್ಟು ಮಂದಗತಿಯಲ್ಲಿ ನಡೆಸಿದ್ದರಿಂದ ಆ ಭಾಗದ ರೈತರು ಮುಖಂಡರು ಸಾಕಷ್ಟು ಅಸಮಾಧಾನ ವ್ಯಕ್ತಪಡಿಸಿದ್ದರು.

ಅರ್ಧಂಬರ್ಧ ಕಾಮಗಾರಿ-ಹಳ್ಳ ಹೂಳೆತ್ತುವ ಕಾಮಗಾರಿ ಪೂರ್ಣಗೊಳಿಸದ ಕಾರಣ ರೈತರು ಶಾಸಕರ ಗಮನಕ್ಕೆ ಸಾಕಷ್ಟು ಬಾರಿ ತಂದಿದ್ದರು. ಶಾಸಕರು ಇಲಾಖೆ



ಅಧಿಕಾರಿಗಳಿಗೆ ಸೂಚಿಸಿದ ನಂತರ ಈಗ ಮತ್ತೆ ಕಾಮಗಾರಿ ಪ್ರಾರಂಭಿಸಲಾಗಿದೆ. ಆದರೆ ಸಮಸ್ಯೆ ಇರುವ ಸ್ಥಳವನ್ನು ಬೇರೆ ಕಡೆಗೆ ಮಾಡುತ್ತಿರುವುದರಿಂದ ಮತ್ತು ಹಳ್ಳ ಆಳವಾಗಿರುವುದರಿಂದ ಕೆಲಸ ಪ್ರಾರಂಭಿಸುತ್ತಿದ್ದಂತೆ ರಸ್ತೆ ಕುಸಿಯುತ್ತಿದೆ. ಮಳೆಗಾಲದಲ್ಲಿ ಹಳ್ಳದಲ್ಲಿ ನೀರು ಹರಿಯುತ್ತದೆ. ಈಗ ಕೆಲಸ ಪ್ರಾರಂಭಿಸಿದ್ದಾರೆ. ಹಳ್ಳವನ್ನು ಅಗೆದಂತೆ ನೀರು ಭೂಮಿಯಲ್ಲಿ ಪಸರಿಸಿ ರಸ್ತೆ ಕುಸಿಯುತ್ತಿದೆ. ಇನ್ನೂ ಹೆಚ್ಚಿಗೆ ರಸ್ತೆ ಕುಸಿಯುವ ಸಾಧ್ಯತೆ ಇದೆ ಎಂದು ರೈತರು ತೀವ್ರ ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಓರ್ವ ಸಾವು!?-ಇದೇ ಹಳ್ಳ ಹೂಳೆತ್ತು ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದ ಕಾರಣ ಹಾಗೂ ರಸ್ತೆ ಕುಸಿದಿದ್ದರಿಂದ ವಾಹನ ಸವಾರನೊಬ್ಬ ರಾತ್ರಿ ವೇಳೆ ಬಿದ್ದು ಸಾವನ್ನಪ್ಪಿದ್ದಾನೆ ಎಂದು ಹೇಳಲಾಗುತ್ತಿದೆ. ಈಗ ಮತ್ತೆ ರಸ್ತೆ ಕುಸಿದಿದ್ದರಿಂದ ಹಿಂದೆ ನಡೆದಿದ್ದ ಘಟನೆ ನೆನೆದು ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಮೊನ್ನೆಯಷ್ಟೆ ರಾತ್ರಿ ವೇಳೆ ಕಾರೊಂದುಕುಸಿದರಸ್ತೆಯಲ್ಲಿಸಿಲುಕಿಕೊಂಡ ಘಟನೆಯೂ ನಡೆದಿದೆ. ರಸ್ತೆ ಮತ್ತು ಕುಸಿದು ಹೆಚ್ಚಿನ ಅನಾಹುತ ಸಂಭವಿಸುವ ಮೊದಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ರಸ್ತೆ ದುರಸ್ತಿಗೊಳಿಸಿ ಹಳ್ಳದಿಂದ ಆಗುತ್ತಿರುವ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ಕೆಲಸ ಮಾಡಬೇಕು. ಇಲ್ಲದಿದ್ದರೆ ಯಾವುದೇ ಅನಾಹುತ ಸಂಭವಿಸಿದರೆ ಅದಕ್ಕೆ ಅಧಿಕಾರಿಗಳೆ ಹೊಣೆ ಎಂದು ರೈತರು ವಾಹನ ಸವಾರರು ಎಚ್ಚರಿಕೆ ನೀಡಿದ್ದಾರೆ.

# ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂರವರ ಜನ್ಮ ದಿನಾಚರಣೆ



**ರಬಕವಿ-ಬನಹಟ್ಟಿ :** ಭಾರತ ಕಂಡ ಅಪ್ರತಿಮ ವಿಜ್ಞಾನಿ ಭಾರತ ರತ್ನ ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ರವರ ಜನ್ಮ ದಿನಾಚರಣೆಯ ನಿಮಿತ್ಯವಾಗಿ ಭಾವ ಚಿತ್ರಕ್ಕೆ ಪುಷ್ಪಾರ್ಚನೆ, ಸಾರ್ವಜನಿಕರಿಗೆ ಸಿಹಿ ಹಂಚಿ ಹುಟ್ಟು ಹಬ್ಬ ಆಚರಣೆಯನ್ನು ಸಮೀಪದ ಹೊಸೂರದಲ್ಲಿ ಡಾ. ಎಪಿಜೆ ಅಬ್ದುಲ್ ಕಲಾಂ ಅಲ್ಪಸಂಖ್ಯಾತರ ವಿವಿದೊದ್ದೇಶಗಳ ಹಾಗೂ ಗ್ರಾಮೀಣ ಅಭಿವೃದ್ಧಿ ಸೇವಾ ಸಂಸ್ಥೆ ವತಿಯಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಸಿರಾಜ್ ಹೊರಟ್ಟಿ, ಶಂಕರಾನಂದ ಮಠದ, ಪರಮಪೂಜ್ಯ ಪ್ರೇಮಾನಂದ ಶ್ರೀಗಳು, ಹಿರಿಯರಾದ ಹಾರುನಸಾಬ ಹೊರಟ್ಟಿ, ನೂರಸಾಬ ಮುಜಾವರ, ಅಬ್ದುಲ್ ಹೊರಟ್ಟಿ, ಹಸನ್ ಜಮಾದಾರ, ಹಾಫಿಜ್ ಆದಮ್ ಹೊರಟ್ಟಿ, ಬುರಾನ ಫತ್ತೆ, ಶಾರು ಹೊರಟ್ಟಿ, ಚಾಂದ ಹುಡೇದಮನಿ, ರಿಯಾಜ ಜಮಖಂಡಿ, ಶರೀಫ ಹುಡೇದಮನಿ, ಇಮಾಮ ಹೊರಟ್ಟಿ, ಫರೀದ ಅತ್ತಾರ, ದಿಲಾವರ ಫಣಿಬಂದ, ಅಬುಬಕ್ಕರ ಹೊರಟ್ಟಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.




**ದಿ.ಕೆ.ಶಿವರಾಮ ಅವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದ ಛಲವಾದಿ ಮಹಾಸಭಾ ಬಾಗಲಕೋಟ ಜಿಲ್ಲಾ ಘಟಕ ಹಾಗೂ ಜಮಖಂಡಿ ತಾಲೂಕ ಘಟಕದಿಂದ ಉತ್ತಮ ಆಡಳಿತ ನಿರ್ವಹಣೆ ಪ್ರಶಸ್ತಿ ಪುರಸ್ಕೃತರಾದ ಜಮಖಂಡಿ ಉಪವಿಭಾಗಾಧಿಕಾರಿ ಶ್ರೀಮತಿ ಶ್ವೇತಾ ಬೀಡಿಕರ ಅವರನ್ನು ಕಚೇರಿಯಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ವಿವೇಕಾನಂದ ವಿ.ಗರಸಂಗಿ, ಉಮಾಪತಿ ಡಿ.ನೀಲನಾಯಕ, ಜೈಭೀಮ, ಶ್ರೀಧರ ಚಿಕ್ಕಲಕಿ, ಸಿದ್ದರಾಜ ಸೊನ್ನದ, ಸಿದ್ದು ಮೀಸಿ, ಶರಣು ಕಂಬೋಗಿ, ಕುಶಾಲ ವಾಗ್ಮಾರೆ, ಶಶಿಕಾಂತ ತೇರದಾಳ, ರವಿ ದೊಡಮನಿ, ಪ್ರಶಾಂತ ನೀಲನಾಯಕ, ರಾಘವೇಂದ್ರ ರಾಯಭಾಗ, ರವಿ ಸಿಂಗೆ, ರವಿ ಜಂಗಿ, ಸಂತೋಷ ಸುತಾರ, ಲಕ್ಷ್ಮಣ ಕಾಂಬಳೆ, ಶರಣು ನೀಲನಾಯಕ ಇತರರು ಹಾಜರಿದ್ದರು.**

# ಮೂರು ಮಾನದಂಡಗಳಿಂದ ಸಾಹಿತ್ಯದ ಅವಲೋಕನ: ಡಾ. ಕೊಕ್ಕನವರ







**ಜಮಖಂಡಿ :** ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯ ಈ ಮೂರು ಮಾನದಂಡಗಳನ್ನು ಇಟ್ಟುಕೊಂಡು ಕನ್ನಡ ಸಾಹಿತ್ಯದ ಅವಲೋಕನ ಮಾಡಬೇಕು. ಮೌರ್ಯರ ಸಾಮ್ರಾಜ್ಯಕ್ಕಿಂತ ಹಿಂದೆಯೂ ಮತ್ತು ಸಿಂಧೂತೀರದ ನಾಗರಿಕತೆಯ ನಂತರವೂ ಕನ್ನಡ ಸಂಸ್ಕೃತಿ ಇತ್ತು ಎಂದು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಧ್ಯಾಪಕ ಡಾ.ವೈ.ವೈ. ಕೊಕ್ಕನವರ ಹೇಳಿದರು.

ಇಲ್ಲಿನ ಬಸವ ಭವನ ಸಮುದಾಯ ಭವನದಲ್ಲಿ ಭಾನುವಾರ ನಡೆದ ಜಮಖಂಡಿ ತಾಲ್ಲೂಕು 9ನೇ ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ಗೋಷ್ಠಿಯಲ್ಲಿ 'ಕನ್ನಡ ಸಾಹಿತ್ಯದ ಅವಲೋಕನ' ಕುರಿತು ಅವರು ಮಾತನಾಡಿದರು.

ಚಿಂತಕ ಮಹಾಲಿಂಗಪ್ಪ ಆಲಬಾಳ 'ದಲಿತ ಸಾಹಿತ್ಯದ ನಿಲುವುಗಳು' ಕುರಿತು ಮಾತನಾಡಿ, ಶರಣಾಗತ ಸಾಹಿತ್ಯ, ಸ್ವಾಭಿಮಾನದ ಸಾಹಿತ್ಯ ಹಾಗೂ ಬೇರೆ ಸಮುದಾಯದವರು ದಲಿತರ ಪರವಾಗಿ ಬರೆದ ಸಾಹಿತ್ಯ ಎಂದು ದಲಿತ ಸಾಹಿತ್ಯದಲ್ಲಿ ಮೂರು ಪ್ರಕಾರಗಳನ್ನು ಗುರುತಿಸಬಹುದು ಎಂದರು.

ಅಸಹಾಯಕತೆ ಮತ್ತು ನೋವುಗಳನ್ನು ಹೇಳಿಕೊಳ್ಳುವುದು ಶರಣಾಗತ ಸಾಹಿತ್ಯ, ಅಸ್ಮಿತೆಯ ಹುಡುಕಾಟಕ್ಕಾಗಿ ಬರೆದ ಸಾಹಿತ್ಯವನ್ನು ಸ್ವಾಭಿಮಾನದ ಸಾಹಿತ್ಯ ಎನ್ನಲಾಗುತ್ತದೆ. ಬೇರೆ ಸಮುದಾಯದವರು ದಲಿತರ ಪರವಾಗಿ ಬರೆದ ಸಾಹಿತ್ಯದಲ್ಲಿ ಅನುಭವದ ಕೊರತೆ ಎದ್ದು ಕಾಣುತ್ತದೆ ಎಂದು ವಿಶ್ಲೇಷಿಸಿದರು.

ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯರಾದ ಡಾ.ಸುನಂದಾ ಶಿರೂರ 'ಸ್ತ್ರೀ ಸಂವೇದನೆಗಳು' ಕುರಿತು ಮಾತನಾಡಿ, ಕುಟುಂಬದಲ್ಲಿ, ಸಾಹಿತ್ಯದಲ್ಲಿ ಹಾಗೂ ಸಮಾಜದಲ್ಲಿ ಸ್ತ್ರೀ ಸಂವೇದನೆಗಳನ್ನು ಗುರುತಿಸಬಹುದು ಎಂದರು.

ಹುಟ್ಟಿದ ಮನೆ, ಕೊಟ್ಟ ಮನೆ ಬೇರೆಯಾಗಿದ್ದರೂ ಕುಟುಂಬದಲ್ಲಿ ಮೆಟ್ಟಿ ನಿಲ್ಲುವ ಸಾಮರ್ಥ್ಯ ಮಹಿಳೆಯರಿಗಿರುವ ಮೊದಲ ಸಂವೇದನೆ. ಜನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಗಳನ್ನು ಕನಸು, ಆಲೋಚನೆಗಳನ್ನು ಹಾಡಿನ ಮೂಲಕ ಹೊರಹಾಕಿದ್ದಾರೆ. ನೆಲ ನೋಡಿಕೊಂಡು ನಡೆಯಬೇಕೆನ್ನುವ ಅರ್ಥದಲ್ಲಿ 'ಹೆಣ್ಣಿನ ಬುದ್ಧಿ ಮೊಳಕಾಲ ಕೆಳಗೆ' ಎಂಬುದು ಸಮಾಜದಲ್ಲಿ ಮಹಿಳೆಯರ ಬಗೆಗಿನ ಅನಿಸಿಕೆಯಾಗಿದೆ ಎಂದರು.

ಹಿರಿಯ ಸಾಹಿತಿ, ನಿವೃತ್ತ ಪ್ರಾಧ್ಯಾಪಕ ಬಿ.ಪಿ. ನ್ಯಾಮಗೌಡ ಮಾತನಾಡಿ, ಶಬ್ದ ಮತ್ತು ಅರ್ಥ ಇವು ಸಾಹಿತ್ಯದ ಕಚ್ಚಾ ವಸ್ತುಗಳು. ಶಬ್ದ ಸಾಹಿತ್ಯದ ಶರೀರ. ಅರ್ಥ ಸಾಹಿತ್ಯದ ಆತ್ಮ. ಶಬ್ದಗಳಿಗೆ ಮಿತಿಯಿದೆ. ಆದರೆ, ಅರ್ಥಕ್ಕೆ ಮಿತಿಯಿಲ್ಲ. ಶಬ್ದ ಮತ್ತು ಅರ್ಥಗಳ ಅರ್ಥಮಾಡಿಕೊಂಡ ಬಳಿಕ ಸಾಹಿತ್ಯ ರಚನೆಗೆ ಇಳಿಯಬೇಕು ಎಂದರು.

ದಸಂಸ ರಾಜ್ಯ ಘಟಕದ ಸಂಚಾಲಕ ಯಮನಪ್ಪ ಗುಣದಾಳ ಮಾತನಾಡಿದರು. ಸಮ್ಮೇಳನಾಧ್ಯಕ್ಷ ಸಹಜಾನಂದ ಅವಧೂತರು ಸಾನ್ನಿಧ್ಯ ವಹಿಸಿದ್ದರು. ಕಸಾಪ ರಬಕವಿ–ಬನಹಟ್ಟಿ ತಾಲ್ಲೂಕು ಘಟಕದ ಅಧ್ಯಕ್ಷ ಮ.ಕೃ. ಮೇಗಾಡಿ, ಕಸಾಪ ಬೀಳಗಿ ತಾಲ್ಲೂಕು ಘಟಕದ ಅಧ್ಯಕ್ಷ ಗುರುರಾಜ ಲೂತಿ, ಉಪನ್ಯಾಸಕಿ ವಿಮಲಾ ಬೊಮ್ಮನಹಳ್ಳಿ, ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಇದ್ದರು. ಕಸಾಪ ಜಮಖಂಡಿ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಸ್ವಾಗತಿಸಿದರು. ಸಂಗಮೇಶ ಉಟಗಿ ನಿರೂಪಿಸಿದರು. ಸಂಗಮೇಶ ಕುಬಕಡ್ಡಿ ವಂದಿಸಿದರು.

# ಕಾವ್ಯ ಜೀವದ ದ್ರವ್ಯ: ಡಾ. ಶಾರದಾ ಮುಳ್ಳೂರ




**ಜಮಖಂಡಿ :** ಕವಿತೆ ಮನಸ್ಸಿನ ಒಳನೋಟವನ್ನು ತೆರೆದಿಡುತ್ತದೆ. ಕಾವ್ಯ ಎಂದರೆ ಹರಿಯುವ ಝರಿ. ಕಾವ್ಯ ಜೀವದ ದ್ರವ್ಯ. ಕಾವ್ಯ ಬದುಕಿಗೆ ಸತ್ವವನ್ನು ನೀಡಬೇಕು ಎಂದು ಸಾಹಿತಿ, ಮುಖ್ಯ ಶಿಕ್ಷಕಿ ಡಾ.ಶಾರದಾ ಮುಳ್ಳೂರ ಹೇಳಿದರು.

ಇಲ್ಲಿನ ಬಸವ ಭವನ ಸಮುದಾಯ ಭವನದಲ್ಲಿ ಭಾನುವಾರ ನಡೆದ ಜಮಖಂಡಿ ತಾಲ್ಲೂಕು 9ನೇ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೆಯ ಗೋಷ್ಠಿ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕವಿತೆ ಎಂದರೆ ಕಾಮನಬಿಲ್ಲು. ಕಾವ್ಯ ಸಂಪರ್ಕ ಸೇತುವೆ. ಕಾವ್ಯ ಹೋರಾಟದ ಹಾದಿ. ಕಾವ್ಯ ಮಾನಸಿಕ ಸ್ಥಿತಿಯ ಉತ್ಕೃಷ್ಟ ಉನ್ನತಿ ಎಂದರು.

ಸಾಹಿತಿ, ನಿವೃತ್ತ ಶಿಕ್ಷಕ ಗುರುನಾಥ ಸುತಾರ ಕವಿತೆ ಎಂದರೇನು? ಕವಿತೆ ಹುಟ್ಟುವ ಬಗೆಯ ಕುರಿತು ಆಶಯ ಭಾಷಣ ಮಾಡಿದರು. ಸಮ್ಮೇಳನಾಧ್ಯಕ್ಷ ಪೂಜ್ಯಶ್ರೀ ಸಹಜಾನಂದ ಅವಧೂತರು ಸಾನ್ನಿಧ್ಯ ವಹಿಸಿದ್ದರು.

ಬಾಹುಬಲಿ ಬಿರಾದಾರಪಾಟೀಲ, ಗಣಪತಿ ಗಲಗಲಿ, ಮುರಳಿ ಮೀಸಿ, ಚಂದ್ರಕಲಾ ಜನಗೌಡ, ಬಸಮ್ಮ ಬಾಗೋಜಿ, ಭಾಗ್ಯಶ್ರೀ ಕೋಟಿ, ಪ್ರವೀಣ ಕುಲಕರ್ಣಿ, ಗುರುಲಿಂಗಪ್ಪ ಹಾದಿಮನಿ, ಸರಿತಾ ಶಿರಗುಪ್ಪಿ, ಹನಮಂತ ಬಟಕುರ್ಕಿ, ಅನಿತಾ ಪಾಟೀಲ, ಶ್ರೀಶೈಲ ಕಾಂಬಳೆ, ಪದ್ಮಶ್ರೀ ತಳಕೇರಿ, ಚಂದ್ರಕಾಂತ ಜಡಿಮಠ, ಭಾರತಿ ಮದಿನವರ, ರವಿ ರತ್ನಾಕರ, ಸಂಗಪ್ಪ ಗುಗ್ಗರಿ, ಮುತ್ತು ಕಾಂಬಳೆ, ವೈಷ್ಣವಿ ದೇವನಾಳ ಸ್ವರಚಿತ ಕವನಗಳನ್ನು ವಾಚನ ಮಾಡಿದರು. ನರಸಿಂಹ ಕಲ್ಲೋಳ್ಳಿ ಸ್ವಾಗತಿಸಿದರು. ಡಾ.ಮೃತ್ಯುಂಜಯ ಗವಿಮಠ ನಿರೂಪಿಸಿದರು. ಪಿ.ಆರ್. ರಾಮತಾಳ ವಂದಿಸಿದರು.

# ಸಾಹಿತ್ಯ ಸಮ್ಮೇಳನ ಐಕ್ಯತೆಯ ಪ್ರತೀಕ: ಡಾ. ಗಿರಡ್ಡಿ

**ಜಮಖಂಡಿ :** ಕನ್ನಡ ಸಾಹಿತ್ಯ ಸಮ್ಮೇಳನಗಳು ಕನ್ನಡಿಗರ ಒಗ್ಗೂಡುವಿಕೆ ಮತ್ತು ಐಕ್ಯತೆಯ ಪ್ರತೀಕ. ಸಾಹಿತ್ಯಾಸಕ್ತರ ಕವಿಗಳ, ಲೇಖಕರ, ಕಲಾವಿದರ ಹಾಗೂ ಸಾಂಸ್ಕೃತಿಕ ಉತ್ಸಾಹಿಗಳ ಸಮಾಗಮವೆ ಸಾಹಿತ್ಯ ಸಮ್ಮೇಳನದ ವೈಶಿಷ್ಟ್ಯ ಎಂದು ಬಸವಜ್ಯೋತಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ ಹೇಳಿದರು.

ಸ್ಥಳೀಯ ಬಸವಭವನದಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಮಹಾಸ್ವಾಮಿಗಳ ವೇದಿಕೆಯಲ್ಲಿ ಭಾನುವಾರ ನಡೆದ ಜಮಖಂಡಿ ತಾಲ್ಲೂಕು 9ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸನ್ಮಾನ ಮತ್ತು ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.




ಕನ್ನಡದಲ್ಲಿ ವಿವಿಧ ಪ್ರಕಾರಗಳನ್ನು ವೃದ್ಧಿಸುವುದು, ಕನ್ನಡ ಭಾಷೆಯ ಸಂಶೋಧನೆ, ವಿಚಾರ ಸಂಕಿರಣಗಳನ್ನು ಆಯೋಜಿಸುವುದು, ಕನ್ನಡ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಹಾಗೂ ವಿವಿಧ ಕ್ಷೇತ್ರಗಳ ವಿಶೇಷ ಸಾಧಕರನ್ನು ಗುರುತಿಸಿ ಸನ್ಮಾನಿಸುವುದು ಸಮ್ಮೇಳನದ ಉದ್ದೇಶವಾಗಿದೆ ಎಂದರು.

ಹುಲ್ಯಾಳ ಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತ ಮಾತನಾಡಿ, ನಮ್ಮನ್ನು ಓದಿಸಿಕೊಂಡು ಹೋಗುವಂತ ಸಾಹಿತ್ಯವನ್ನು ರಚಿಸಬೇಕು. ರಾಷ್ಟ್ರ ರಾಷ್ಟ್ರಗಳ ನಡುವಿನ ಯುದ್ಧಗಳನ್ನು ತಪ್ಪಿಸುವ, ರಾಜ್ಯ ರಾಜ್ಯಗಳ ನಡುವಿನ ಜಗಳಗಳನ್ನು ಬಗೆಹರಿಸುವಂತ ಸಾಹಿತ್ಯ ಬರಬೇಕು ಎಂದು ಸಾಹಿತಿಗಳಿಗೆ ಸಲಹೆ ನೀಡಿದರು.

ಹಿರಿಯ ವಕೀಲ ಎನ್.ಎಸ್. ದೇವರವರ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನಾಧ್ಯಕ್ಷರು ಪರಮಪೂಜ್ಯಶ್ರೀ ಸಹಜಾನಂದ ಅವಧೂತರು ಸಾನ್ನಿಧ್ಯ ವಹಿಸಿದ್ದರು. ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಭಾಜಪ ನಗರ ಘಟಕದ ಅಧ್ಯಕ್ಷ ಅಜಯ ಕಡಪಟ್ಟಿ, ವಿಧಾನ ಪರಿಷತ್ ಮಾಜಿ ಶಾಸಕ ಜಿ.ಎಸ್. ನ್ಯಾಮಗೌಡ, ಸಮ್ಮೇಳನದ ಕೋಶಾಧ್ಯಕ್ಷ ಡಾ.ಉಮೇಶ ಮಹಾಬಳಶೆಟ್ಟಿ, ಕಾನಿಪ ಜಮಖಂಡಿ ಘಟಕದ ಅಧ್ಯಕ್ಷ ಅಪ್ಪು ಪೋತರಾಜ, ಕೆಪಿಟಿಸಿಎಲ್ ನೌಕರರ ಸಂಘದ ಪರಶುರಾಮ ಗುದಗಿಯವರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧಕ್ಷ ಸಿ.ಜಿ. ಕಡಕೋಳ ಇದ್ದರು.

ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಸ್ವಾಗತಿಸಿದರು. ಉಪನ್ಯಾಸಕಿ ಚಂದ್ರಕಲಾ ಜನಗೌಡ ನಿರೂಪಿಸಿದರು. ನಾವಲಗಿಯ ಭಜನಾ ಮಂಡಳದ ಕಲಾವಿದರ ಮಂಗಳ ಭಜನೆಯೊಂದಿಗೆ ಸಮಾರಂಭ ಸಮಾಪ್ತಿಯಾಯಿತು.

# ಅನ್ನದಾಸೋಹ 'ಅನ್ನದಾನವು ಶ್ರೇಷ್ಠ ದಾನವಾಗಿದೆ'




**ಮೂಡಲಗಿ :** ಲಯನ್ಸ್‌ಕ್ಲಬ್ ಮೂಡಲಗಿ ಪರಿವಾರದಿಂದ ಸ್ಥಳೀಯ ಸಮುದಾಯಆರೋಗ್ಯಕೇಂದ್ರದ ಒಳ ಮತ್ತು ಹೊರ ರೋಗಿಗಳಿಗೆ 99ನೇ ಪಾಕ್ಷಿಕಅನ್ನದಾಸೋಹವನ್ನು ಏರ್ಪಡಿಸಿದ್ದರು.

ಲಯನ್ಸ್ ಪರಿವಾರ ಅಧ್ಯಕ್ಷ ಸಂಜಯ ಮೋಕಾಶಿ ಮಾತನಾಡಿ 'ಅನ್ನದಾನವ ಶ್ರೇಷ್ಠ ದಾನವಾಗಿದ್ದು ಲಯನ್ಸ್ ಕ್ಲಬ್‌ದಿಂದ ಕೆಳೆದ ಹಲವು ವರ್ಷಗಳಿಂದ ಸಮುದಾಯ ಆರೋಗ್ಯಕೇಂದ್ರದ ರೋಗಿಗಳಿಗೆ ಅನ್ನದಾನ ಸೇವೆಯನ್ನು ಸಲ್ಲಿಸುತ್ತಿರವೆವು' ಎಂದರು.

ಲಯನ್ಸ್ ಪರಿವಾರದ ಖಜಾಂಚಿ ಕೃಷ್ಣಾ ಕೆಂಪಸತ್ತಿ ಅವರು ತಮ್ಮ ಚಿರಂಜೀವ ವಿಜಯನ ಹುಟ್ಟು ಹಬ್ಬವನ್ನು ರೋಗಿಗಳಿಗೆ ದಾಸೋಹ ಸೇವೆ ಮಾಡುವ ಮೂಲಕ ಆಚರಿಸಿದರು. ಸಮುದಾಯ ಆರೋಗ್ಯ ಕೇಂದ್ರದ ಶಿವಲಿಂಗ ಪಾಟೀಲ ಅವರು ಅನ್ನದಾಸೋಹ ಸೇವೆಗೆ ಚಾಲನೆ ನೀಡಿದರು.

ವೆಂಕಟೇಶ ಸೋನವಾಲಕರ, ನಿಂಗಪ್ಪ ಫೀರೋಜಿ, ಮಹಾವೀರ ಸಲ್ಲಾಗೋಳ, ಅಪ್ಪಣ್ಣ ಬಡಿಗೇರ ಭಾಗವಹಿಸಿದ್ದರು.350ಕ್ಕೂ ಅಧಿಕ ಸಂಖ್ಯೆಯಲ್ಲಿ ಅನ್ನ ದಾಸೋಹದಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಒಳ, ಹೊರ ರೋಗಿಗಳು ಹಾಗೂ ರೋಗಿಗಳ ಸಂಬಂಧಿಕರು ಭಾಗವಹಿಸಿದ್ದರು.

# ಬಸವಣ್ಣನವರ ಆಚಾರ ಪತ್ನಿ ಗಂಗಾಂಬಿಕೆ ಸ್ಮರಣೋತ್ಸವ

ವಿಶ್ವಗುರು ಬಸವಣ್ಣನವರು ಆರಂಭಿಸಿದ ಕ್ರಾಂತಿಕಾರ್ಯದಲ್ಲಿ ಅವರ ಕುಟುಂಬವೂ ತೊಡಗಿತ್ತು. ಅಕ್ಕನಾಗಮ್ಮ ತಾಯಿ ಬಸವಣ್ಣನವರ ಕಾರ್ಯಕ್ಕೆ ಬಹುದೊಡ್ಡ ಶಕ್ತಿಯಾಗಿದ್ದರು. ಅವರು ಬಸವಣ್ಣನವರ ಸತಿಯರಾದ ಗಂಗಾಂಬಿಕೆ ಮತ್ತು ನೀಲಾಂಬಿಕೆಯವರನ್ನು ಜೊತೆಗೂಡಿಸಿಕೊಂಡು ಮಹಾಮನೆಗೆ ಆಗಮಿಸುತ್ತಿರುವ ಶರಣ ಬಳಗಕ್ಕೆ ಅನ್ನ, ಅರಿವು, ಆಶ್ರಯ ನೀಡುವ ಕಾರ್ಯ ಮಾಡಿದರು. ನೀಲಾಂಬಿಕೆ ಬಸವಣ್ಣನವರ ವಿಚಾರಪತ್ನಿ ಎಂದು ಹೇಳಿಕೊಂಡರೆ, ಗಂಗಾಂಬಿಕೆ ಅವರು ಬಸವಣ್ಣನವರ ಆಚಾರಪತ್ನಿ ಯಾಗಿರುವುದು ಬಹುವಿಶೇಷ.


ಗಂಗಾಂಬಿಕೆ ಬಲದೇವನ ಮಗಳು. ಬಲದೇವನ ಮಂಗಳವೇಡೆಯ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿ ಆಗಿದ್ದನು. ಬಲದೇವ ಮಗಳ ದೈವಭಕ್ತಿ, ವೀರತನ ಕಂಡು ಸಂತಸ ಪಡುತ್ತಿದ್ದ. ಗಂಗಾಂಬಿಕೆಗೆ ಬಿಲ್ವಿದ್ಯೆ, ಕತ್ತಿವರಸೆ ವಿದ್ಯೆಯ ಜೊತೆಗೆ ಕನ್ನಡ, ಸಂಸ್ಕೃತ, ಸಂಗೀತ ಕಲಿಸಿದ. ಬಲದೇವ ತನ್ನ ಮಗಳ ಪ್ರತಿಭೆ ಕಂಡು ಹಿರಿ ಹಿರಿ ಹಿಗ್ಗುತ್ತಿದ್ದನು. ದೇವರು ಪ್ರತಿಭೆಯ ಜೊತೆಗೆ ಅಪ್ರತಿಮ ಸೌಂದರ್ಯವನ್ನು ಕರುಣಿಸಿದ. ದುರ್ದೈವದಿಂದ ಗಂಗಾಂಬಿಕೆ ಮಗುವಿದ್ದಾಗಲೇ ತಾಯಿ ಲಿಂಗೈಕ್ಯಳಾಗಿದ್ದಳು. ಬಲದೇವನೇ ತಾಯಿ–ತಂದೆಯಾಗಿ ಪ್ರೀತಿ ಕರುಣಿಸಿದ.

ನೋಡು ನೋಡುತ್ತಿದ್ದಂತೆ ಗಂಗಾಬಿಕೆ ಬೆಳೆದು ದೊಡ್ಡವಳಾದಳು. ಬಲದೇವ ಮಗಳಿಗೆ ಯೋಗ್ಯ ವರ ನೋಡಬೇಕೆಂದು ಆಲೋಚನೆ ಮಾಡುತ್ತಿದ್ದ. ಯೋಗಾಯೋಗವೆಂಬಂತೆ ಕೂಡಲಸಂಗಮದಿಂದ ಬಲದೇವ ಮಂತ್ರಿಗಳಿಗೆ ಆಮಂತ್ರಣ ಬಂದಿತ್ತು. ಆಗಿನ ಕಾಲದಲ್ಲಿ ಕೂಡಲಸಂಗಮ ದಕ್ಷಿಣ ಭಾರತದಲ್ಲಿಯೇ ಬಹುದೊಡ್ಡ ವಿದ್ಯಾಕೇಂದ್ರವಾಗಿತ್ತು. ಪ್ರತಿವರ್ಷ ಪದವಿ ಪ್ರದಾನ ಸಮಾರಂಭ ನಡೆಯುತ್ತಿತ್ತು . ಬಲದೇವ ಮಂತ್ರಿಗಳಿಗೆ ವಿದ್ಯಾಕೇಂದ್ರದ ಅಧಿಪತಿಯಾದ ಈಶಾನ್ಯ ಗುರುಗಳು ಮುಖ್ಯ ಅತಿಥಿಯಾಗಿ ಭಾಗವಹಿಸಬೇಕೆಂದು ಆಮಂತ್ರಣ ಕಳಿಸಿದರು. ಗುರುಗಳ ಆಜ್ಞೆಯಂತೆ ಬಲದೇವ ಮಂತ್ರಿ ಆಮಂತ್ರಣ ಸ್ವೀಕರಿಸಿ, ಕೂಡಲಸಂಗಮಕ್ಕೆ ಆಗಮಿಸಿದನು. ಕೂಡಲಸಂಗಮದಲ್ಲಿ ಪದವಿ ಪ್ರದಾನ ಸಮಾರಂಭ ಆರಂಭವಾಯಿತು. ಬಸವಣ್ಣನವರಲ್ಲಿರುವ ಪ್ರತಿಭೆ, ಶಿಸ್ತು ಸಂಘಟನಾ ಶಕ್ತಿ ಹಾಗೂ ಅಪಾರ ಜೀವ ಕಾರುಣ್ಯ ಇರುವುದನ್ನು ಗುರುತಿಸಿದ ಗುರುಗಳು ಈ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ಬಸವಣ್ಣನವರಿಗೆ ಒಪ್ಪಿಸಿದ್ದರು. ಸಮಾರಂಭದಲ್ಲಿ ವಿದ್ಯಾರ್ಥಿಗಳ ಪರವಾಗಿ ಜನಪರ ಭಕ್ತಿಸಂಪನ್ನ ಸಮಾಜ ವ್ಯವಸ್ಥೆಯ ಕುರಿತ ಬಸವಣ್ಣನವರ ಮಾತುಗಳು ಬಲದೇವನಿಗೆ ಹಿಡಿಸಿದವು. ಅವರ ಸಾಮಾಜಿಕ ಚಿಂತನೆ, ಆ ದಿನಮಾನದ ಅಗತ್ಯವು ಆಗಿದೆ ಎಂದು ಆಲೋಚಿಸಿದರು. ಅವರ ವಿದ್ವತ್ತು ಮತ್ತು ಲೋಕಹಿತದ ಕಳಕಳಿಯ ಮಾತಿನ ಪ್ರಭಾವ ಬಲದೇವನ ಮೇಲೆ ಆಯಿತು. ಅವರು ಗುರುಗಳಿಗೆ ಈ ಯುವಕ ಯಾರು? ಎಂದು ವಿಚಾರಿಸಿದರು. ಗುರುಗಳ ಆಶ್ಚರ್ಯದಿಂದ, ನಿಮಗೆ ಗೊತ್ತಿಲ್ಲವೇ ? ಇವನು ನಿಮ್ಮ ತಂಗಿ ಮಾದಲಾಂಬಿಕೆಯ ಮಗ ಬಸವಣ್ಣ, ನಿನ್ನ ಸೋದರಳಿಯ. ಗುರುಗಳ ಈ ಮಾತು ಕೇಳಿ ಬಲದೇವನಿಗೆ ಅಪಾರ ಸಂತೋಷವಾಯಿತು. ಅವರಿಗೆ ಗಂಗಾಂಬಿಕೆಯ ನೆನಪಾಯಿತು. ಅವನು ನನ್ನ ಮಗಳಿಗೆ ಯೋಗ್ಯ ವರ ಎಂದು ಭಾವಿಸಿದರು. ಬಲದೇವರು ಆ ಸಮಾರಂಭಕ್ಕೆ ತಮ್ಮ ಮಗಳಿಗೂ ಕರೆದುಕೊಂಡು ಬಂದಿದ್ದರು. ಗುರುಗಳಿಗೆ ಏಕಾಂತದಲ್ಲಿ ದರ್ಶನ ಪಡೆದು ತನ್ನ ಇಚ್ಛೆ ವ್ಯಕ್ತಪಡಿಸಿದರು. ಗುರುಗಳು ಅಕ್ಕನಾಗಮ್ಮನವರನ್ನು ಕರೆಯಿಸಿ ಬಲದೇವ ಮಂತ್ರಿಯ ವಿಚಾರ ತಿಳಿಸಿದರು. ಅಕ್ಕನಾಗಮ್ಮನವರಿಗೆ ಖುಷಿಯಾಯಿತು. ಅವರು ಬಸವಣ್ಣನವರ ಜೊತೆ ಮಾತನಾಡಿ ಗುರುಗಳಿಗೆ ಒಪ್ಪಿಗೆ ನೀಡಿದರು.

ದಾಂಪತ್ಯ ಜೀವನ:

ಬಲದೇವ ಮಂತ್ರಿ ಗಂಗಾಂಬಿಕೆ ಮತ್ತು ಬಸವಣ್ಣನವರ ವಿವಾಹ ಬಹು ವಿಜೃಂಭಣೆಯಿಂದ ನೆರವೇರಿಸಿದರು. ಗಂಗಾಂಬಿಕೆ ಬಸವಣ್ಣನವರ ಸಮಾಜೋದ್ಧಾರ್ಮಿಕ ಕಾರ್ಯಕ್ಕೆ ಮಾರಕವಾಗದೇ ಪೂರಕವಾದರು. ಬಸವಣ್ಣನವರ ಕಾರ್ಯಕ್ಕೆ ಎಣ್ಣೆಯಾಗಿ, ಬತ್ತಿಯಾಗಿ ದುಡಿದರು.

ಬಸವಣ್ಣನವರು ಕಲ್ಯಾಣಕ್ಕೆ ಬಂದು ಮಹಾಮನೆ ಕಟ್ಟುತ್ತಾರೆ. ಮಹಾಮನೆಯಲ್ಲಿ ಬಸವಣ್ಣ ,ಅಕ್ಕನಾಗಮ್ಮ, ನೀಲಾಂಬಿಕೆ ಹಾಗೂ ಗಂಗಾಂಬಿಕೆ ಇರುತ್ತಾರೆ. ಇವರ ಮನೆಗೆ ಬಂದ ಎಲ್ಲಾ ಶರಣರನ್ನು ಗಂಗಾಂಬಿಕೆ ಉಪಚಾರ ಮಾಡುತ್ತಿದ್ದರು. ಬಂದವರು ಶಿವ ಚಿಂತನೆ ಮಾಡುವಾಗ ಷಟಸ್ಥಲ ಮತ್ತು ತ್ರಿಲಿಂಗದ ಸಕಲಗಳ



ಬಗ್ಗೆ, ಅಷ್ಟಾವರಣ ವಚನಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು.

ಕಲ್ಯಾಣ ಕ್ರಾಂತಿಯಾದ ನಂತರ ನೀಲಾಂಬಿಕೆಯವರು ಸಂಗಮಕ್ಕೆ ತೆರಳಿದರು. ಬಿಜ್ಜಳನ ಕೊಲೆಯಾದ ನಂತರ ಗಂಗಾಂಬಿಕೆ ಶರಣರಿಗೆ ಮುಂದಾಳಾಗಿ ಶರಣರು ಮತ್ತು ವಚನ ಶಾಸ್ತ್ರದ ಉಳಿವಿಗಾಗಿ ಬಸವಕಲ್ಯಾಣದಲ್ಲಿ ಖಡ್ಗವನ್ನು ಹಿಡಿದು ವಚನಗಳನ್ನು ಬೆನ್ನಿಗೆ ಕಟ್ಟಿಕೊಂಡು ಹೋರಾಡುವಾಗ ಆಕಾಶದಲ್ಲಿ ಜಗಾಟೆ ಜಾಗರಿ ಓಂಕಾರನಾದ ಹೊರಗೆ ಬರುತ್ತಿತ್ತು, ಪಂಚ ಗಣಾಧೀಶರು ನಿಂತು ನೊಡ್ಯಾರ.

ಗಂಗಾಂಬಿಕೆಯ ಬದುಕಿನ ಕುರಿತು 'ಶಿವತತ್ವ ಚಿಂತಾಮಣಿ'ಯಲ್ಲಿ ಲಕ್ಕಣ್ಣ ದಂಡೇಶ ಹೀಗೆ ಹೇಳುತ್ತಾನೆ, 'ಗಂಗಾಂಬಿಕೆ, ತನು–ಮನವನೊಚ್ಚತಗೊಟ್ಟು ಬಸವರಾಜ ಚಿತ್ತದನುಗುಣವಾದ ಸತಿಯಾದಳು' ಬಸವಣ್ಣನವರ ಚಿತ್ತದಲ್ಲಿ ಮನೆ ಮಾಡಿದ್ದ ಕಲ್ಯಾಣ ರಾಜ್ಯದ ಕನಸು ನನಸು ಮಾಡುವಲ್ಲಿ ಗಂಗಾಂಬಿಕೆಯವರು ತಮ್ಮ ಜೀವನ ಸಮರ್ಪಿಸಿದರು. ಅದಕ್ಕೆ ಶರಣಬಳಗವೆಲ್ಲ ಗಂಗಾಂಬಿಕೆಯವರನ್ನು 'ಆಚಾರಪ್ರಾಣಿ', 'ಗುರುಪ್ರಾಣಿ' ಎಂದು ಗೌರವಿಸಿತು.

ಜ್ಞಾನದ ಸಹಜ ನೆರಳಿನಂತೆ ಹಿಂಬಾಲಿಸುತ್ತದೆ' ಎಂಬ ಬಲ್ಲವರ ನುಡಿಯಂತೆ ಬಸವಣ್ಣನವರ ಅಂತರಂಗದ ಅರಿವಿನ ಸ್ವರೂಪವಾಗಿದ್ದ ಕನಸುಗಳಿಗೆ ಸಾಕಾರಗೊಳಿಸುವಲ್ಲಿ ಗಂಗಾಂಬಿಕೆಯವರು ಎಲೆಮರೆಯ ಕಾಯಿಯಂತೆ ಕಾರ್ಯ ಮಾಡಿದರು. ಗಂಗಾಂಬಿಕೆ ತಾಯಿಯವರ ಜೀವನ ಕಾವೇರಿ ನದಿಯಂತೆ ಹರಿಯುತ್ತಾ ಹೊರಗೆ ತೋರಗೊಡದೆ ಅಂತರಂಗದ ಶಿವಯೋಗ ಸಾಧಕರಾಗಿ ಅನುಭಾವದ ಎತ್ತರಕ್ಕೆ ಬೆಳೆದು ಲಿಂಗದೇವನಿಗೆ ಸಮರ್ಪಿತವಾದ ಬದುಕು ಗಂಗಾಂಬಿಕೆಯವರದ್ದು.

ವಚನ ದರ್ಶನ:

ಗಂಗಾಂಬಿಕೆ ತಾಯಿಯವರು ಒಂದು ಲಕ್ಷದ ಎಂಟು ಸಾವಿರ ವಚನಗಳನ್ನು ಬರೆದಿದ್ದಾರೆ ಎಂದು ಸಿದ್ಧರಾಮೇಶ್ವರರು ತಮ್ಮ ಒಂದು ವಚನದಲ್ಲಿ ದಾಖಲಿಸಿದ್ದಾರೆ. ಆದರೆ ಅವರ ಕೇವಲ ಒಂಬತ್ತು ವಚನಗಳು ಮಾತ್ರ ಸಿಕ್ಕಿವೆ. ಸಿಕ್ಕ ಒಂಬತ್ತು ವಚನಗಳಲ್ಲಿ ಚಾರಿತ್ರಿಕ ದಾಖಲೆಗಳಿವೆ. ಬಸವಣ್ಣನವರ ತಾಯಿ–ತಂದೆಯ ಹೆಸರುಗಳು ಉಲ್ಲೇಖವಿದೆ. ಒಂದೊಂದು ವಚನಗಳು ಅನುಭಾವದ ರತ್ನದಂತೆ ಕಂಗೊಳಿಸುತ್ತವೆ. ಗಂಗಾಂಬಿಕೆಯವರ ಅಂತರಂಗದ ಸಾಧನೆ, ಯೋಗದ ನಿಲವು ವಚನಗಳಲ್ಲಿ ಮೂಡಿ ಬಂದಿದೆ. 'ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತೊ, ಮಾದಲಾಂಬಿಕಾ ನಂದನನವು? ಸಾಂದ್ರವಾಗಿ ಬಿಜ್ಜಳನವರ ಮನೆಯ ನ್ಯಾಯ ನೊಳನೆಂತೊ ಮಾದರಸನ ಮೋಹದ ಮಗನು? ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿ ಅನುಗೆಯ್ವನೆಂತೊ ಗಂಗಾಪ್ರಿಯ ಕೂಡಲಸಂಗಮನ ಶರಣಚೆನ್ನ?' ಗಂಗಾಂಬಿಕೆಯವರು ವಚನದಲ್ಲಿ ಚಾರಿತ್ರಿಕ ಹಾಗೂ ಬಸವಣ್ಣನವರ ಜಗದಗಲ ಕಾರ್ಯದ ದರ್ಶನ ಮಾಡಿಸಿದ್ದಾರೆ. ಸಾಂದ್ರ ಎಂದರೆ ದಟ್ಟ, ಉತ್ಕಟವಾದದು.

ಬಸವಣ್ಣನವರ ಹೃದಯದಲ್ಲಿ ಭಕ್ತಿಸಾಗರವೇ ಅಡಗಿತ್ತು. ಭಕ್ತಿ ಎಂದರೆ ಬಸವಣ್ಣ, ಬಸವಣ್ಣ ಎಂದರೆ ಭಕ್ತಿ. ಅದಕ್ಕೆ ಮಹಾಮನೆಗೆ ಬಂದವರೂ ಯಾರೂ ಮರಳಿ ಹೋಗುತ್ತಿರಲಿಲ್ಲ. ಬಂದವರೆಲ್ಲ ಅಮರಗಣಂಗಳಾಗುತ್ತಿದ್ದರು. ಒಂದು ಕಣವೂ ನಾನೂ ಮಾಡಿದೆ ಮಾಡುತ್ತಿರುವೆ ಎಂಬ ಭಾವ ಬಸವಣ್ಣನವರಲ್ಲಿ ಸುಳಿಯಲಿಲ್ಲ. ಅವರ ಸ್ವಭಾವಕ್ಕೆ ತಕ್ಕಂತೆ ವಿನಯದಿಂದ ವರ್ತಿಸಿ ಅವರ ಅಂತರಂಗದಲ್ಲಿ ಪ್ರೀತಿಯ ಝರಿಯುಕ್ಕುವಂತೆ ಮಾಡುತ್ತಿದ್ದರು. ಇದುವೆ ಸಾಂದ್ರವಾಗಿ ಹರಗಣಭಕ್ತಿ. ಈ ವಚನದಲ್ಲಿ ಗಂಗಾಂಬಿಕೆ ಅವರು ಬಸವಣ್ಣನವರ ಬಾಹ್ಯಸಾಧನೆ, ಲೋಕಸೇವೆ, ಆಂತರಿಕ ಸಾಧನೆಯ ದರ್ಶನ ಮಾಡಿಸಿದ್ದಾರೆ. ಬಸವಣ್ಣನವರು ಬಿಜ್ಜಳನ ಮಹಾಮಂತ್ರಿಯಾಗಿ ತತ್ವನಿಷ್ಠೆ, ನೀತಿನಿಷ್ಠೆ, ನ್ಯಾಯನಿಷ್ಠೆಯಿಂದ ನಡೆದುಕೊಳ್ಳುವ ರೀತಿ ಗಂಗಾಂಬಿಕೆಯವರು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಹೆಮ್ಮೆ ಪಟ್ಟಿದ್ದಾರೆ. ಬಸವಣ್ಣನವರ ಹೃದಯದಲ್ಲಿ ಪ್ರೀತಿಯ ಜೊತೆ, ನ್ಯಾಯ ನಿಷ್ಠೆ ತುಂಬಿಕೊಂಡಿತ್ತು. ಲೋಕವಿರೋಧಿ ಶರಣನಾರಿಗೂ ಅಂಜುವನಲ್ಲ. ಹರಳಯ್ಯ ಮಧುವರಸನ ಪ್ರಸಂಗದಲ್ಲಿ ಅನ್ಯಾಯವಾದಾಗ ಮಂತ್ರಿಸ್ಥಾನಕ್ಕೆ ತಿಲಾಂಜಲಿ ಕೊಟ್ಟರು. ರಾಜಾಧಿರಾಜನಾದ ಪರಮಾತ್ಮನೆ ಎಲ್ಲರಿಗೂ ಆಶ್ರಯವೇ ಹೊರತು ಬಿಜ್ಜಳನಲ್ಲ ಎಂಬ ಪ್ರಜ್ಞೆ ಸದಾ ಬಸವಣ್ಣನವರ ಹೃದಯದಲ್ಲಿತ್ತು ಎಂದು ಗಂಗಾಂಬಿಕೆಯವರು ಅರಿತ್ತಿದ್ದರು, ಅನುಭವಿಸಿದ್ದರು. ಅದಕ್ಕಾಗಿ ಎಂತಹ ಸಂದರ್ಭದಲ್ಲಿ ಗಂಗಾಂಬಿಕೆ ಅವರು ಧೈರ್ಯಗೆಡದೆ ಅಶಾಂತರಾಗದೆ, ಸಮಾಧಾನದಿಂದ ಬಂದ ಪರಿಸ್ಥಿತಿಯನ್ನು ಎದುರಿಸುವ ಮನೋಭಾವ ಹೊಂದಿದ್ದರು. ಅವರ ಈ ವ್ಯಕ್ತಿತ್ವದ ದರ್ಶನ ಕಲ್ಯಾಣದಲ್ಲಿ ನಡೆದ ಶರಣರ ಹತ್ಯಾಕಾಂಡ ಪ್ರಸಂಗದಲ್ಲಿ ಕಾಣಬರುತ್ತದೆ.

**ವಚನ ಸಾಹಿತ್ಯ ರಕ್ಷಣೆ:**

**ಅವಳ ಕಂದ ಬಾಲಸಂಗ, ನಿನ್ನ ಕಂದ ಚೆನ್ನಲಿಂಗ**
**ಎಂದು ಹೇಳಿದರಮ್ಮಾ ಎನ್ನ ಒಡೆಯರು.**
**ಫಲವಿಲ್ಲದ ಕಂದನಿರ್ಪನವಳಿಗೆ,**
**ಎನಗೆ ಫಲವಿಲ್ಲ, ಕಂದನಿಲ್ಲ.**
**ಇದೇನೋ ದುಃಖದಂದುಗ**
**ಗಂಗಾಪ್ರಿಯ ಕೂಡಲಸಂಗಮದೇವಾ** ?

ಕಲ್ಯಾಣದಲ್ಲಿ ಹತ್ಯಾಕಾಂಡ ನಡೆದಾಗ ಶರಣರಿಗೆಲ್ಲ ಮೊದಲು ಸವಾಲು ಎಂದರೆ ವಚನ ಸಾಹಿತ್ಯ ರಕ್ಷಣೆ.

ವಚನ ಸಾಹಿತ್ಯ ರಕ್ಷಣೆಗೆ ಗಂಗಾಬಿಕೆ ತಾಯಿಯವರ ಪಾತ್ರ ಬಹಳ ಮಹತ್ವದ್ದು. ಗಂಗಾಂಬಿಕೆ ತಾಯಿ ವಚನ ಸಾಹಿತ್ಯ ರಕ್ಷಣೆಗೆ ಮುಂದಾಗುತ್ತಾರೆ. ಕಲ್ಯಾಣದಿಂದ ಗುಪ್ತಮಾರ್ಗವಾಗಿ ಪಾರಾಗಿ ವೈರಿಗಳನ್ನು ಎದುರಿಸುತ್ತ ಕಾಸರವಳ್ಳಿ ತಲುಪುತ್ತಾರೆ. ಮಡಿವಾಳ ಮಾಚಿದೇವ, ಡೋಹಾರ ಕಕ್ಕಯ್ಯ, ಅಕ್ಕನಾಗಮ್ಮ ಮುಂತಾದ ಶರಣರು ಗಂಗಾಂಬಿಕೆ ತಾಯಿ ಜೊತೆ ಇರುತ್ತಾರೆ. ಅಲ್ಲಿ ಯುದ್ಧವಾಗುತ್ತದೆ. ಯುದ್ಧದಲ್ಲಿ ಗಂಗಾಂಬಿಕೆಯವರು ಗಾಯಗೊಳ್ಳುತ್ತಾರೆ. ಶರಣರು ಮತ್ತು ವಚನ ಶಾಸ್ತ್ರದೊಂದಿಗೆ ಕಾದಾರ ಹೊಳಿತನಕ, ಮುಕುಟ ಖಾನ ಹುಬ್ಬಳ್ಳಿ ಎಂಬ ಗ್ರಾಮದಲ್ಲಿ ಇಷ್ಟಲಿಂಗದಲ್ಲಿ ದೃಷ್ಟಿ ಇಟ್ಟಾಗ ಲಿಂಗೈಕ್ಯರಾದರು.

* * *



**ಲೇಖನ ಸಂಗ್ರಹ :**
**ಸಿದ್ಧಲಿಂಗ ಶಿವಯೋಗಿ ಸ್ವಾಮಿ**
**ಮಠಪತಿ ಉಚ್ಚ**
**ತಾ. ಭಾಲ್ಕಿ ಜಿ ಬೀದರ.**

# ಕೊಣ್ಣೂರ ಆಂಗ್ಲ ಮಾಧ್ಯಮ ಶಾಲೆ ವಿಭಾಗಮಟ್ಟಕ್ಕೆ ಆಯ್ಕೆ



**ರಬಕವಿ-ಬನಹಟ್ಟಿ :** ಈಲ್ಲಾ ಮಟ್ಟದ ಪ್ರಾಥಮಿಕ ಶಾಲೆಗಳ ಬಾಲ್ ಬ್ಯಾಡ್ಮಿಂಟನ್ ಕ್ರೀಡಾ ಸ್ಪರ್ಧೆಯಲ್ಲಿ ಯಲ್ಲಟ್ಟಿಯ ಕೊಣ್ಣೂರ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ಬಾಲಕರ ತಂಡ ಪ್ರಥಮ ಸ್ಥಾನ ಗಳಿಸಿ ವಿಭಾಗಮಟ್ಟಕ್ಕೆ ಆಯ್ಕೆಯಾಗಿದೆ.

ಸಾಧನೆ ಮೆರೆದ ಎಲ್ಲ ಮಕ್ಕಳಿಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪ್ರೊ.ಬಸವರಾಜ ಕೊಣ್ಣೂರ, ಉಪಾಧ್ಯಕ್ಷ ನಿಖಿಲ್ ಕೊಣ್ಣೂರ, ಆಡಳಿತಾಧಿಕಾರಿ ಶೀತಲ ಕೊಣ್ಣೂರ, ಮುಖ್ಯಗುರು ರಾಜಶೇಖರ ಮೊಟಗಿ, ದೈಹಿಕ ಶಿಕ್ಷಕ ಪ್ರಸಾದ ಜನವಾಡ, ದುಂಡಯ್ಯ ಮಠದ, ಮಹಾಂತೇಶ ಹುನ್ನೂರ ಸೇರಿದಂತೆ ಸಿಬ್ಬಂದಿ ಅಭಿನಂದಿಸಿದ್ದಾರೆ.

## ಅಲ್ಲಮಪ್ರಭು ನೂತನ ದೇವಸ್ಥಾನ ಲೋಕಾರ್ಪಣೆ ನಿಮಿತ್ತ ಬಸವ ಪುರಾಣಕ್ಕೆ ಹರಗುರುಚರಮೂರ್ತಿಗಳಿಂದ ಚಾಲನೆ

# ಅಲ್ಲಮ-ಬಸವಣ್ಣ ಈ ನಾಡಿನ ಅಗ್ರಗನ್ಯ ರತ್ನಗಳು: ಡಾ. ಮಹಾಂತ ಶ್ರೀ



**ತೇರದಾಳ :** 12ನೇ ಶತಮಾನದಲ್ಲಿ ಅನುಭವ ಮಂಟಪ ನಿರ್ಮಿಸಿದ ವಿಶ್ವಗುರು ಬಸವಣ್ಣ ಹಾಗೂ ಮಂಟಪದ ಪೀಠಾಧ್ಯಕ್ಷರಾಗಿದ್ದ ಅಲ್ಲಮಪ್ರಭು ಈ ನಾಡಿನ ಅಗ್ರಗನ್ಯ ರತ್ನಗಳು ಎಂದು ಬೆಳಗಾವಿ ಶೇಗುಣಸಿ ವಿರಕ್ತಮಠದ ಡಾ. ಮಹಾಂತಪ್ರಭು ಬಣ್ಣಿಸಿದರು.

ಭಕ್ತರ ದೇಣಿಗೆ ಹಣದಲ್ಲಿ ನಿರ್ಮಿಸಿರುವ ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭು ನೂತನ ದೇವಸ್ಥಾನ ಲೋಕಾರ್ಪಣೆ ನಿಮಿತ್ತ ಹಮ್ಮಿಕೊಂಡಿರುವ ಬಸವ ಪುರಾಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಅಲ್ಲಮನಂತಹ ಮೇದಾವಿ ಬೇರೆ ಯಾರು ಇಲ್ಲ. ಅಂತಹ ಶ್ರೇಷ್ಠ ವಚನಕಾರ ಅಲ್ಲಮನ ಕ್ಷೇತ್ರ ತೇರದಾಳ ಪುಣ್ಯದ ಭೂಮಿ ಆಗಿದೆ. ಭಕ್ತರ ದೇಣಿಗೆ ಹಣದಲ್ಲಿ ಅಲ್ಲಮನ ದೇವಸ್ಥಾನ ನಿರ್ಮಾಣಗೊಂಡಿದ್ದು ಇತಿಹಾಸಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಜಗತ್ತಿನ ಪ್ರಜಾಪ್ರಭುತ್ವದ ತಾಯಿ ಇಂಗ್ಲೇಂಡ ಎನಿಸಿಕೊಂಡರೆ ಭಾರತದ ಅಲ್ಲಮಪ್ರಭು ತಂದೆ ಎಂದು ಇಂಗ್ಲೇಂಡಿನಲ್ಲಿ ಕೊಂಡಾಡಿರುವುದು ಎಂತಹ ಹೆಮ್ಮೆಯ ಸಂಗತಿ. ಅಂತಹ ಸತ್ಪುರುಷ ನಮ್ಮ ನಾಡಿನವರಾಗಿರುವುದಕ್ಕಿಂತ ಪುಣ್ಯ ಬೇರೆ ಏನು ಇದೆ ಎಂದು ಭಕ್ತರಿಗೆ ಹೃದಯಮುಟ್ಟುವಂತೆ ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಹಂದಿಗುಂದದ ಶಿವಾನಂದ ಶ್ರೀ, ಚಿಮ್ಮಡ ವಿರಕ್ತಮಠದ ಪ್ರಭು ಶ್ರೀ ಹಾಗೂ ರಬಕವಿ ಬ್ರಹ್ಮಾನಂದ ಮಠದ ಗುರುಸಿದ್ದೇಶ್ವರ ಶ್ರೀ, ಅಲ್ಲಮಪ್ರಭುದೇವರ ದೇವಸ್ಥಾನ ಉದ್ಘಾಟನೆಯಲ್ಲಿ ಪಾಲ್ಗೊಳ್ಳುವುದೆ ಒಂದು ಸೌಭಾಗ್ಯ. ದಕ್ಷಿಣದಿಂದ ಉತ್ತರಕ್ಕೆ ಭಕ್ತರು ಬರುವ ಹಾಗೆ ಕಾರ್ಯಕ್ರಮ ಆಯೋಜಿಸಿದ್ದು ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು. ದೇವಸ್ಥಾನ ಜೀರ್ಣೋದ್ಧಾರ ಸೇವಾ ಸಮಿತಿ ಅಧ್ಯಕ್ಷ ಶಾಸಕ ಜಗದೀಶ ಗುಡಗುಂಟಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಬನಹಟ್ಟಿ ಹಿರೇಮಠದ ಶರಣಬಸವ ಶಿವಾಚಾರ್ಯ, ಹಳಿಂಗಳಿ ಕಮರಿಮಠದ ಶಿವಾನಂದ ಶ್ರೀ, ಸ್ಥಳೀಯ ಹಿರೇಮಠದ ಗಂಗಾಧರ ದೇವರು, ಅರ್ಚಕ ಸಮಿತಿ ಅಧ್ಯಕ್ಷ ಗುಹೇಶ್ವರ ಪುರಾಣಿಕಮಠ, ವಿಜಯಮಹಾಂತೇಶ ನಾಡಗೌಡ, ಗೌತಮ ರೋಡಕರ, ಅರ್ಚಕ ಪರಯ್ಯ ಮೇಲಿನಮನಿ, ಪೃಥ್ವಿರಾಜ ನಾಡಗೌಡ, ಪ್ರಸಾದ ಸಮಿತಿಯ ಸಿದ್ದಪ್ಪ ಗುಡ್ಡಿ ಇದ್ದರು.

# ಕುಂದರಗಿ ವಲಯ ಅಧ್ಯಕ್ಷರಾಗಿ ಪಾಂಡಪ್ಪ ಕನಸಗೇರಿ ನೇಮಕ



**ಬೀಳಗಿ :** ಬೀಳಗಿ ತಾಲೂಕು ಕನ್ನಡ ಜಾನಪದ ಪರಿಷತ್ತಿನ ಕುಂದರಗಿ ಜಿಪಂ ಮತಕ್ಷೇತ್ರ ವ್ಯಾಪ್ತಿಯ ವಲಯ ಘಟಕದ ಅಧ್ಯಕ್ಷರನ್ನಾಗಿ ಪಾಂಡಪ್ಪ ಅರ್ಜುನ ಕನಸಗೇರಿ ಹಾಗೂ ಗಲಗಲಿ ಜಿಪಂ ಮತಕ್ಷೇತ್ರ ವ್ಯಾಪ್ತಿಯ ವಲಯ ಘಟಕದ ಅಧ್ಯಕ್ಷರನ್ನಾಗಿ ಹನಮಂತ ಕಲ್ಲೊಳೆಪ್ಪ ಹೊಳೆಯಪ್ಪಗೋಳ ಅವರನ್ನು ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಜಾನಪದ ಕಲೆಗಳು, ಕ್ಷೇತ್ರ ಕಾರ್ಯ, ದಾಖಲೀಕರಣ, ತರಬೇತಿ ಮೂಲಕ ಜಾನಪದ ಕಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಕ್ರಿಯಾಶೀಲವಾಗಿ ಮತ್ತು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕೆಂದು ಬೀಳಗಿ ತಾಲೂಕು ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಬಸವರಾಜ ದಾವಣಗೆರೆ (ಬಸವರಾಜ ಬಿ. ಕೆ.) ತಿಳಿಸಿದ್ದಾರೆ.

# 30 ರಂದು ವಿಭಾಗ ಮಟ್ಟದಲ್ಲಿ ಯುವಕವಿಗೋಷ್ಠಿ

**ಬಾಗಲಕೋಟೆ :** ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕಸಂಭ್ರಮ-50ರಅಭಿಯಾನದಅಂಗವಾಗಿ ಬೆಂಗಳೂರು. ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗಗಳಲ್ಲಿ ವಿಭಾಗವಾರು ಯುವ ಕವಿಗೋಷ್ಠಿಗಳನ್ನು ಆಯೋಜಿಸುತ್ತಿದ್ದು, ಆಸಕ್ತ 20 ರಿಂದ 40 ವರ್ಷ ವಯಸ್ಸಿನ ಯುವಕವಿಗಳಿಂದ ಕವಿತೆಗಳನ್ನು ಆಹ್ವಾನಿಸಲಾಗಿದೆ.

ರಾಜ್ಯದ ಎಲ್ಲ ಭಾಗದ ಆಸಕ್ತ ಕವಿಗಳು ಕನಿಷ್ಠ 3 ಕವಿತೆಗಳನ್ನು ಕಳುಹಿಸಿ ಕೊಡಬಹುದಾಗಿದೆ. ಕವಿತೆಗಳನ್ನು ಕಳುಹಿಸಲು ಕೊನೆಯ ದಿನ ಅಕ್ಟೋಬರ 30 ಆಗಿದ್ದು, ಆಸಕ್ತಕವಿಗಳು ಕವಿತೆಗಳನ್ನು ಸಲ್ಲಿಸುವಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜಾಲತಾಣ http://karna-takasahitfyaacademy.org ದಿಂದ ಮಾಹಿತಿ ಪಡೆದುಕೊಳ್ಳುವಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿರಕ್ತಮಠಕ್ಕೆ ಶೂನ್ಯ ಸಂಹಾಸನ ಅರ್ಪಣೆ ನಿವೃತ ಅರಣ್ಯಾಧಿಕಾರಿಯ ಭಕ್ತಿಸೇವೆ



**ಚಿಮ್ಮಡ :** ಗ್ರಾಮದ ವಿರಕ್ತಮಠಕ್ಕೆ ಶೂನ್ಯ ಸಿಂಹಾಸನವನ್ನು ನಿವೃತ್ತ ಅರಣ್ಯಾಧಿಕಾರಿ ವಾಸುದೇವ ಇಗವೆ ಕಾಣಿಕೆಯಾಗಿ ನೀಡಿದ್ದು ಶ್ರೀಮಠದ ಭಕ್ತರು ಹಾಗೂ ಶ್ರೀಗಳು ಶ್ಲಾಘಿಸಿದ್ದಾರೆ.


ಹನ್ನೆರಡನೇ ಶತಮಾನದಲ್ಲಿ ಶ್ರೀ ಪ್ರಭುಲಿಂಗೇಶ್ವರರ ಶೂನ್ಯ ಪೀಠದ ಮಾದರಿಯಲ್ಲೆ ರಚಿಸಲಾಗಿರುವ ಈ ಸಿಂಹಾಸನವನ್ನು ಸುಮಾರು ಎರಡು ಕ್ವಿಂಟಾಲ್ ದಾಂಡೇಲಿಯ ಶುಧ್ಧ ಸಾಗವಾನಿ ಕಟ್ಟಿಗೆಯಿಂದ ರಚಿಸಲಾಗಿದ್ದು, ಬೀಳಗಿಯ ಕಾಡಪ್ಪ ಬಡಿಗೇರ ಸುಮಾರು ಆರು ತಿಂಗಳುಗಳ ಕಾಲ ಕೆತ್ತನೆ ಮಾಡಿ ಮಾದರಿ ರಚಿಸಲಾಗಿದ್ದು ಸೋಮವಾರ ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳಿಗೆ ಸಮರ್ಪಿಸಿದರು. ಅಲ್ಲದೇ ವಿರಕ್ತಮಠಕ್ಕೆ ಅವಶ್ಯವಿರುವ ಮೂರು ಕಾಲಿನ ಪೀಠವನ್ನೂ ಮುಂದಿನ ವರ್ಷ ನೀಡುವುದಾಗಿ ನಿವೃತ್ತ ಅರಣ್ಯಾಧಿಕಾರಿ ವಾಸುದೇವ ಇಗವೆಯವರು ಶ್ರೀಗಳಿಗೆ ವಾಗ್ದಾನ ನೀಡಿದರು. ಪ್ರಭು ಶ್ರೀಗಳು ವಾಸುದೇವ ಇಗವೆ ಅವರನ್ನು ಸತ್ಕರಿಸುವ ಮೂಲಕ ಗೌರವಿಸಿದರು.

ಲಕ್ಷಾಂತರ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಈ ಶೂನ್ಯ ಸಿಂಹಾಸನವನ್ನು ಶ್ರೀಮಠಕ್ಕೆ ಕಾಣಿಕೆಯಾಗಿ ನೀಡಿರುವ ವಾಸುದೇವರವರ ಕಾರ್ಯಕ್ಕೆ ಗ್ರಾಮಸ್ಥರು ಹಾಗೂ ಶ್ರೀಮಠದ ಭಕ್ತರು ಶ್ಲಾಘಿಸಿದ್ದಾರೆ.

**ಮಠ, ಮಂದಿರಗಳಿಗೆ ನೀಡಿರುವ ಯಾವುದೇ ಕೊಡುಗೆ, ಸಲ್ಲಿಸಿದ ಕಾಣಿಕೆ ಭಕ್ತರಿಗೆ ಯಾವತ್ತೂ ಹಾನಿಯಲ್ಲ, ಅದು ಇನ್ನಾವುದೋ ರೂಪದಲ್ಲಿ ಪ್ರತಿಫಲ ಸಿಕ್ಕೇ ಸಿಗುತ್ತದೆ. ವಾಸುದೇವ ಇಗವೇಯವರು ಹಿಂದಿನ ವರ್ಷ ವಿರಕ್ತಮಹಾಸ್ವಾಮಿಗಳ ಪುಣ್ಯ ಸ್ಮರಣೋತ್ಸವದಂದು ಶ್ರೀಮಠಕ್ಕೆ ಬ್ರಹತ್ ಪಲ್ಲಕ್ಕಿ ನೀಡಿದ್ದರು, ಈಗ ಶೂನ್ಯ ಸಿಂಹಾಸನ ನೀಡುವ ಮೂಲಕ ತಮ್ಮ ಭಕ್ತಿ ಸೇವೆ ಸಮರ್ಪಿಸಿದ್ದಾರೆ.**

**। ಶ್ರೀ ಪ್ರಭು ಮಹಾಸ್ವಾಮಿಗಳು**
**ವಿರಕ್ತಮಠ ಚಿಮ್ಮಡ.**

# ಶ್ರೀಪಾಲ ತೇಜನ್ನವರ ನಿಧನ



**ತೇರದಾಳ :** ಇಲ್ಲಿನ ಜೈನ್ ಸಮಾಜದ ಹಿರಿಯರಾದ ಶ್ರೀಪಾಲ ನಿಂಗಪ್ಪ ತೇಜನ್ನವರ(93) ನಿಧನರಾದರು. ಮೃತರಿಗೆ ಪತ್ನಿ, ಮೂವರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.

# ಶ್ರೀಮತಿ ಅನಸೂಯಾ ಶಾಂತಪ್ಪ ಅನಾಮಿ ಲಿಂಗೈಕ್ಯ



**ಬಾಗಲಕೋಟ :** ಬಸವರಾಜ್ ಅನಾಮಿ ಮತ್ತು ಶಿವಾನಂದ್ ಅನಾಮಿ (ವಕೀಲರು) ಇವರ ಮಾತೋಶ್ರೀ ಶ್ರೀಮತಿ ಅನಸೂಯಾ ಶಾಂತಪ್ಪ ಅನಾಮಿ 82 ಇವರು ಇಂದು ಲಿಂಗೈಕ್ಯರಾಗಿದ್ದು ಅವರ (ಪಾರ್ಥಿವ ಶರೀರವನ್ನು ನಾಳೆ ಬೆಳಿಗ್ಗೆ ಪುನಾ ನಗರದಿಂದ ಬರುವುದು) ಅವರ ಅಂತಿಮ ಸಂಸ್ಕಾರವನ್ನು ನಾಳೆ ದಿನ ಬುಧವಾರ 16/10/2024 ಮುಂಜಾನೆ 10-00 ಗಂಟೆಗೆ ಸ್ವಗೃಹ ಬೃಂದಾವನ ಸೆಕ್ಟರ್ 63೦ ಚರ್ಚ್ ಹಿಂದುಗಡೆ ನವನಗರ ಬಾಗಲಕೋಟೆ ನವನಗರದ ರುದ್ರಭೂಮಿಯಲ್ಲಿ ನಡೆಯುವುದು.

# ಕಲೆ, ಸಂಸ್ಕೃತಿ ಉಳಿಸಿ ಬೆಳೆಸಲು ಶ್ರಮಿಸಿ



**ಹುನಗುಂದ:** ನಾಗಾಲೋಟದ ಬದುಕಿಗೆ ಒಗ್ಗಿ-ಕೊಂಡು ನಾಡಿನ ಉನ್ನತ ಕಲೆ, ಸಂಸ್ಕೃತಿ ಉಳಿಸಿ ಬೆಳೆಸಲು ಶ್ರಮಿಸಬೇಕೆಂದು ಪುರಸಭೆ ಅಧ್ಯಕ್ಷೆ ಭಾಗಶ್ರೀ ರೇವಡಿ ಹೇಳಿದರು.

ಪಟ್ಟಣದ ವಿದ್ಯಾನಗರ ಪುರಸಭೆ ಮಂಗಲ ಭವನದಲ್ಲಿ ನವರಾತ್ರಿ ಮಹೋತ್ಸವ ನಿಮಿತ್ತ ಹೊನ್ನಗುಂದ ಸಂಸ್ಕೃತಿ ಬಳಗದಿಂದ ಭಾನುವಾರ ಹಮ್ಮಿಕೊಂಡಿದ್ದ ನಾಟಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ರಂಗಕರ್ಮಿಗಳು ಸಮಾಜ ಸುಧಾರಣೆ, ಶಿಕ್ಷಣದ ಅವಶ್ಯಕತೆ, ಹೋರಾಟದ ಜೀವನ, ಯಶಸ್ಸಿನ ಸುಂದರ ಬದುಕು ಹೀಗೆ ಹಲವಾರು ಕ್ಷೇತ್ರಗಳು ನಾಟಕದ ತಿರುಳಿನಿಂದ ಮಾದರಿ ಜೀವನಕ್ಕೆ ಮಾರ್ಗದರ್ಶಗಳಾಗಿವೆ. ಶಿಕ್ಷಣದ ಜತೆಗೆ ನಾಟಕ, ಕಲೆ, ಸಂಸ್ಕೃತಿ, ಸಾಹಿತ್ಯ ಹಾಗೂ ಸಮಸ್ತ ಬದುಕಿನ ಯಶಸ್ಸಿನ ಆಯಾಮಗಳನ್ನು ಮಕ್ಕಳಿಗೆ ಬಾಲ್ಯದಲ್ಲೇ ಹೇಳಿಕೊಡಬೇಕೆಂದು ತಿಳಿಸಿದರು.

ನಟ ನಿರ್ದೇಶಕ ಮಹಾಂತೇಶ ಗಜೇಂದ್ರಗಡ ಮಾತನಾಡಿ, ಅಖಂಡ ವಿಜಯಪುರ ಜಿಲ್ಲೆಯ ಬಸವನಾಡಿನ ಬಿಳಿಜೋಳದ ನಾಡು ಹುನಗುಂದ ಕಲೆಯ ತವರೂರು. ತಾಲೂಕಿನ ಸೂಳೇಭಾವಿ ಮತ್ತು ಕಮತಗಿಯಲ್ಲಿ ಜಾತ್ರೆ ಹಬ್ಬ ಹರಿದಿನಗಳಲ್ಲಿ ನಾಟಕ ಪ್ರದರ್ಶನ ನಡೆಯುತ್ತಲೇ ಇವೆ. ಪಿ.ಬಿ. ಧುತ್ತರಗಿ, ಧ್ರುವರಾಜ ದೇಶಪಾಂಡೆ, ಟಿ.ಕೆ. ಮಹ್ಮದಾಲಿ ಸೇರಿ ಹಲವರು ಸಾಕಷ್ಟು ನಾಟಕಗಳನ್ನು ಬರೆದು ರಂಗ ಸಜ್ಜಿಕೆಯಲ್ಲಿ ಪಾತ್ರಧಾರಿಗಳಾಗಿ ನಾಟಕ ಕಲೆ ಜೀವಂತವಿರಿಸಿದ್ದಾರೆ. ಹೊನ್ನಗುಂದ ಸಂಸ್ಕೃತಿ ಬಳಗ ಮತ್ತು ಸ್ನೇಹರಂಗದ ಬಳಗದವರು ವರ್ಷದುದ್ದಕ್ಕೂ ರಂಗಕಲಾ ಪ್ರೇಮಿಗಳಿಗೆ ಕಲೆ ಉಣಬಡಿಸುತ್ತ ಬಂದಿದ್ದಾರೆ. ಶಾಲಾ ಕಾಲೇಜು ಮಟ್ಟದಲ್ಲಿ ಶಿಕ್ಷಣದೊಂದಿಗೆ ರಂಗಕಲೆ ಬಗ್ಗೆ ಆಸಕ್ತಿ ತೋರಬೇಕೆಂದರು.

ಹೊಸಬ ತಂಡದ ಸದಸ್ಯ ಸಂಚಾಲಕ ಶಿವಬಸವ ಅಂಗಡಿ ಅಧ್ಯಕ್ಷತೆ ವಹಿಸಿದ್ದರು.

ತಂಡದ ಹಿರಿಯ ಸದಸ್ಯ ಮಹಾಂತೇಶ ಅಗಸಿಮುಂದಿನ ಪ್ರಾಸ್ತಾವಿಕ ಮಾತನಾಡಿದರು. ಪುರಸಭೆ ಉಪಾಧ್ಯಕ್ಷೆ ರಾಜೇಶ್ವರಿ ಬದಾಮಿ, ಉದ್ಯಮಿ ಅಶೋಕ ಭಾವಿಕಟ್ಟಿ, ಶಿಕ್ಷಕ ರಾಯನಗೌಡ ಪಾಟೀಲ, ತಂಡದ ಕೇಶವ ಅವರಾದಿ, ವಾದಿರಾಜ ಗುಡ್ಡದ, ವೀರೇಶ ಕುರ್ತಕೋಟಿ ಉಪಸ್ಥಿತರಿದ್ದರು. ಐ.ಎಚ್. ನಾಯಕ ನಿರೂಪಿಸಿದರು. ವಿಜಯಕುಮಾರ ಕುಲಕರ್ಣಿ ವಂದಿಸಿದರು. ನಂತರ ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮತ್ತು ದಾಂಪತ್ಯ ಗೀತ ನಾಟಕ ಪ್ರದರ್ಶನಗೊಂಡಿತು.

# ರೈತರ ಮಕ್ಕಳಿಗೆ ಕನ್ಯೆ ಕೊಡಲು ಮನಸ್ಸು ಮಾಡಿ




**ಹುನಗುಂದ :** ಜಗತ್ತಿಗೆ ಅನ್ನ ನೀಡುವ ರೈತರಿಗೆ ಇಂದಿನ ದಿನಗಳಲ್ಲಿ ಕನ್ಯೆ ಕೊಡದಿರುವುದು ದುರ್ದೈವದ ಸಂಗತಿ ಎಂದು ಕೊಲ್ಹಾರದ ದಿಗಂಬರೇಶ್ವರ ಸಂಸ್ಥಾನಮಠದ ಕಲ್ಲಿನಾಥ ಸ್ವಾಮಿಗಳು ಹೇಳಿದರು.

ತಾಲೂಕಿನ ಹಗೇದಾಳದಲ್ಲಿ ಸೋಮವಾರ ರಾತ್ರಿ ವೆಂಕಟೇಶ್ವರ ಜಾತ್ರೆ ಮಹೋತ್ಸವ ಹಾಗೂ ನವರಾತ್ರಿ ಉತ್ಸವದ ನಿಮಿತ್ತ ಆಯೋಜಿಸಿದ್ದ ದೇವಿ ಪುರಾಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಈ ದೇಶದಲ್ಲಿ ಎಂತಹ ದೊಡ್ಡ ಅಧಿಕಾರದಲ್ಲಿದ್ದವರೂ ರೈತರು ಬೆಳೆದ ಆಹಾರ ಸೇವಿಸಲೇಬೇಕು. ಆದ್ದರಿಂದ ಹೆತ್ತವರು ತಮ್ಮ ಮಕ್ಕಳನ್ನು ನೌಕರರಿಗೆ ಮದುವೆ ಮಾಡಿಕೊಡುವ ಮನಸ್ಥಿತಿಯಿಂದ ಹೊರಬಂದು ರೈತರ ಮಕ್ಕಳಿಗೆ ಕೊಡಲು ಮನಸ್ಸು ಮಾಡಬೇಕು ಎಂದರು.

ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ, ಶಿಕ್ಷಣ ನೀಡಿದ್ದೇಯಾದರೆ ಉತ್ತಮ ಆದರ್ಶ ನಿರ್ಮಿಸಲು ಸಾಧ್ಯವಾಗುತ್ತದೆ. ಹಸಿದವರಿಗೆ ಊಟ, ಕಷ್ಟದಲ್ಲಿದ್ದವರಿಗೆ ಕೈಲಾದಷ್ಟು ಸಹಾಯ ಮತ್ತು ದಾನ ಮಾಡಬೇಕು. ತಂದೆ-ತಾಯಿಯನ್ನು ಗೌರವ, ಪ್ರೀತಿ, ವಾತ್ಸಲ್ಯದಿಂದ ಕಾಣಬೇಕು ಎಂದರು.

ವೇ. ಗುರುಶಾಂತಯ್ಯ ಹಿರೇಮಠ, ಶಿವಯೋಗಿ ಅಯ್ಯಪ್ಪಸ್ವಾಮಿ ಶಾಸಿಮಠ, ಪುರಾಣ ಪ್ರವಚನಕಾರ ಹಿರೇಮಠದ ದೊಡ್ಡಬಸಯ್ಯಶಾಸಿ ಹಿರೇಮಠ, ಸಂಗೀತಗಾರ ಯುವರಾಜ ಹಿರೇಮಠ, ತಬಲಾವಾದಕ ವೀರಭದ್ರಯ್ಯ ಗುಡದೂರಕಲ್ಮಠ, ವೆಂಕಟೇಶ್ವರ ದೇವಸ್ಥಾನದ ಟ್ರಸ್ಟ್ ಕಮಿಟಿ ಬಾನಪ್ಪ ಹಗೇದಾಳ ಇದ್ದರು.

# ಪ್ರವಾದಿ (ಸ) ರ ನಿಂದನೆ: ನರಸಿಂಗಾನಂದ ಸ್ವಾಮಿ ವಿರುದ್ಧ ಮುಸ್ಲಿಮರ ಬೃಹತ್ ಪ್ರತಿಭಟನೆ




**ಕೊಪ್ಪಳ :** ಪ್ರವಾದಿ ಪೈಗಂಬರ ಹಜರತ್ ಮೊಹಮ್ಮದ್ (ಸ) ರವರ ಕುರಿತು ಅವಹೇಳನಕಾರಿಯಾಗಿ ಮಾತನಾಡಿ ಅವರ ಬಗ್ಗೆ ನಿಂದನೆ ಮಾಡಿದ ಯತಿ ನರಸಿಂಗಾನಂದ ಸ್ವಾಮಿ ವಿರುದ್ಧ ಕೊಪ್ಪಳ ನಗರದಲ್ಲಿ ಶುಕ್ರವಾರ ಮಧ್ಯಾಹ್ನ ದ ವೇಳೆಯಲ್ಲಿ ಶಾಂತಿಯುತ ಬೃಹತ್ ಪ್ರತಿಭಟನೆ ಯನ್ನೂ ಮುಸ್ಲಿಂ ಸಮಾಜ ಬಾಂಧವರು ಹಮ್ಮಿಕೊಂಡಿದ್ದರು

ನಗರದ ಗಡಿಯಾರ ಕಂಬದ ದಿಂದ ಪ್ರಮುಖ ಜವಾಹರ್ ರಸ್ತೆಯಲ್ಲಿ ಸಂಚರಿಸಿ ಅಶೋಕ್ ಸರ್ಕಲ್ ವರೆಗೆ ಬೃಹತ್ತಾಗಿ ಮತ್ತು ಶಾಂತಿಯುತವಾಗಿ ಪ್ರತಿಭಟನೆ ನಡೆಸಿ, ಪ್ರವಾದಿ (ಸ) ರವರ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ ನರಸಿಂಗಾನಂದ ಸ್ವಾಮಿ ಯವರ ಹೇಳಿಕೆ ಖಂಡಿಸಿ ಕೂಡಲೇ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ರೀತಿಯ ಕ್ರಮ ಜರುಗಿಸುವಂತೆ ಮತ್ತು ಕಠಿಣ ಶಿಕ್ಷೆಗೆ ಒಳಪಡಿಸುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು, ಅಲ್ಲದೆ ನಗರ ಪೊಲೀಸ್ ಠಾಣೆಯಲ್ಲಿ ನರಸಿಂಗಾನಂದ ಸ್ವಾಮಿ ವಿರುದ್ಧ ದೂರು ಸಲ್ಲಿಸಿ ಪ್ರಕರಣ ದಾಖಲಿ ಸಿದರು , ಮುಸ್ಲಿಂ ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಶಾಂತಿಯುತ ಪ್ರತಿಭಟನೆಯಲ್ಲಿ ಪಾಲ್ಗೊಂಡು ಬೃಹತ್ ರ್‍ಯಾಲಿಯನ್ನು ಯಶಸ್ವಿಗೊಳಿ ಸಿದರು ,ಸಂಘಟಕರು ಸೇರಿದಂತೆ ಸದ್ರಿ ಪ್ರತಿಭಟನೆಯಲ್ಲಿ ಮುಸ್ಲಿಂ ಧರ್ಮ ಗುರುಗಳು, ಮುಫ್ತಿ ಗಳು ಮೌಲಾನ ಗಳು ಸಮಾಜದ ಮುಖಂಡರು ಸಮಾಜದ ಜನಪ್ರತಿನಿಧಿಗಳು ಸಮಾಜದ ವಿವಿಧ ಸಂಘಟನೆಗಳ ಪದಾಧಿಕಾರಿಗಳು , ಧರ್ಮ ಗುರು ಮೌಲಾನ ಮುಫ್ತಿ ಮೊಹಮ್ಮದ್ ನಜೀರ್ ಅಹಮದ್ ಖಾದ್ರಿ ತಸ್ಕಿನಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು,

ಅಶೋಕ್ ಸರ್ಕಲ್ ಬಳಿ ಬೃಹತ್ ಪ್ರತಿಭಟನೆ ನಡೆಸಿದ್ಧ ಸ್ಥಳಕ್ಕೆ ಜಿಲ್ಲಾಧಿಕಾರಿ ಕಚೇರಿಯಿಂದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪ್ರತಿ ಭಟನಾಕಾರರಿಂದ ದೂರು ಸ್ವೀಕರಿಸಿ ಜಿಲ್ಲಾಧಿಕಾರಿಗಳ ಕಚೇರಿ ಮೂಲಕ ರಾಷ್ಟ್ರಪತಿಯವರಿಗೆ ಮುಂದಿನ ಕ್ರಮಕ್ಕಾಗಿ ದೂರಿನ ಅರ್ಜಿ ಕಳುಹಿಸುವದಾಗಿ ಹೇಳಿದರು ಪ್ರತಿಭಟನೆಯಲ್ಲಿ ಕೊಪ್ಪಳ ನಗರ ಸೇರಿದಂತೆ ಅಕ್ಕಪಕ್ಕದ ಹಳ್ಳಿಗಳಿಂದ ಸಹ ಮುಸ್ಲಿಂ ಸಮಾಜ ಬಾಂಧವರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು ಮುಸ್ಲಿಂ ಧರ್ಮ ಗುರು ನೂರುಲ್ಲಾ ತಹಸೀನ್ ಆಫೀಸ್ ಮೊಯೋದ್ದೀನ್ ಮೌಲನ ಅಸಾದುಲ್ಲಾ ಮೌಲಾನ ಮೊಹಮ್ಮದ್ ಅಲಿ ಹಿಮಾಹಿತಿ ಹಿದಾಯತ್ ಅಲಿ ಅಲ್ಲದೆ ಹಿರಿಯ ನ್ಯಾಯವಾದಿ ಆಸಿಫ್ ಅಲಿ ಸಮಾಜದ ಮುಖಂಡ ಕೆಎಂ ಸಯ್ಯದ್ ಪೀರ ಹುಸೇನ್ ಹೊಸಳ್ಳಿ ವಕೀಲರು, ಸಮಾಜದ ಮುಖಂಡರಾದ ಭಾಷು ಸಾಬ್ ಖತೀಬ್ ಯುವ ನಾಯಕ ಸಲೀಂ ಮಂಡಲಗೇರಿ ಸಯ್ಯದ್ ಮೆಹಮೋದ ಹುಸೇನಿ ಬಲ್ಲೆ ಸಲೀಂ ಅಲವಂಡಿ ಮೊಹಮ್ಮದ್ ಜಿಲಾನ ಖಲೆದಾರ್ ಮೈ ಲೈಕ ಶಾಬುದ್ದೀನ್ ಸಾಬ್ ನೂರ್ ಬಾಷಾ,ಜಾಕಿರ್ ಹುಸೈನ್ ಖಿಲ್ಲೇದಾರ್, ಅಬ್ದುಲ್ ಅಜೀಜ್ ಮಾನ್ವಿ ಕರ್, ಸಿರಾಜ್ ಮನಿಯರ್ ಯಲಬುರ್ಗಾ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಅಖ್ತರ್ ಸಾಬ್ ಖಾಜಿ, ಚಾಂದ್ ಪಾಶ ಖಿಲ್ಲೆದರ್ ಅಫ್ಜಲ್ ಪಟೇಲ್ ಪೀರ ಹುಸೇನ್ ಮುಜಾವರ್, ಮಾನ್ವಿ ಪಾಷಾ ರಫೀ ಧಾರವಾಡ ಸಿಎಂ ಮುಸ್ತಫಾ ಅಕ್ಬರ್ ಪಾಷಾ ಪಲ್ಟನ್ ಸೇರಿದಂತೆ ಅಂಜುಮನ್ ಕಮಿಟಿಯ ಪದಾಧಿಕಾರಿಗಳು ಸದ್ಭಾವನಾ ವೇದಿಕೆಯ ಕೆಲ ಪದಾಧಿಕಾರಿಗಳು ಪಂಚ್ ಕಮಿಟಿ, ನೌ ಜವಾನ್ ಕಮಿಟಿ ಮಸೀದಿ ಕಮಿಟಿ ಗಳ ಪದಾಧಿಕಾರಿಗಳು ಅನೇಕರು ಪಾಲ್ಗೊಂಡಿದ್ದರು,

# ರೇಬೀಸ್ ರೋಗ ದಿನ ಜನಜಾಗೃತಿ



**ಬಾಗಲಕೋಟ:** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟ, ಜಿಲ್ಲಾ ಸಮೀಕ್ಷಣಾ ಘಟಕ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ ಗುಂಡನಪಲ್ಲೆ ಚಾವಡಿಯಲ್ಲಿ, "ರೇಬೀಸ್ ರೋಗ ದಿನ" ಜನಜಾಗೃತಿ ಆಯೋಜಿಸಲಾಗಿ-ತ್ತು. ಆರೋಗ್ಯ ನಿರೀಕ್ಷಣಾಧಿಕಾರಿ, ಎಸ್ ಎಸ್ ಅಂಗಡಿಯವರು, ಸಾರ್ವಜನಿಕ-ರಿಗೆ ರೇಬೀಸ್ ರೋಗದ ಮಾಹಿತಿ ಕರಪತ್ರ ವಿತರಿಸಿ ಸಾಕು ಪ್ರಾಣಿ ನಾಯಿ ಕಡಿತ ಮಾರಣಾಂತಿಕವಾಗಬಹುದು ರೇಬೀ ಸ್ ರೋಗವು ಪ್ರಾಣಿಗಳ ಜೊಲ್ಲು ರಸ ರೇಬೀಸ್ ವೈರಾಣು ಮಾನವನ ದೇಹ ಸೇರಿ ರೇಬೀಸ್ ಮಾರಣಾಂತಿಕವಾ ಗುತ್ತದೆ ನಾಯಿ ಕಡಿದ ತಕ್ಷಣ ನೀರು ಸಾಬೂನಿನಿಂದ ತೊಳೆಯಿರಿ, ಪಾವಿಡೋನ್ಐಯೋಡಿನ್ ಹಚ್ಚಿರಿ, ತಕ್ಷಣವೇ ಸಮೀಪದ ಆಸ್ಪತ್ರೆ ಹೋಗಿರಿ ವೈದ್ಯರ ಸಲಹೆ ಮೆರೆಗೆ ಆಂಟಿ ರೇಬೀಸ್ ಲಸಿಕೆ.

ರೇಬೀಸ್ ಇಮ್ಯೂನ್ ಗ್ಲೋಬ್ಯುಲಿನ್. ಪೂರ್ಣ ಪ್ರಮಾಣ ಲಸಿಕೆ ಪಡೆಯಿರಿ ನಿರ್ಲಕ್ಷತನಬೇಡ ಮೂಢನಂಬಿಕೆ ಬೇಡ. ನಿಮ್ಮ ಸಾಕು ನಾಯಿಗಳಿಗೆ ತಪ್ಪದೇ ಪಶು ಆಸ್ಪತ್ರೆಯಲ್ಲಿ ನಿಯಮಿತ ಲಸಿಕೆ ಹಾಕಿಸಿ ನಾಯಿ ಕಡಿತ ತಡೆಗಟ್ಟಿ ಎಂದು ಮಹಿತಿ ನೀಡಿದರು.

"ರೇಬೀಸ್ ದಿನ ಜನಜಾಗೃತಿ" ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ವಿವಿಧ ಹಂತದ ಆರೋಗ್ಯ ಅಧಿಕಾರಿಗಳು ಆಶಾ ಕಾರ್ಯಕರ್ತರು, ಗ್ರಾಮದ ಸಂಗಪ್ಪ ಬೇನಾಳ,ಬಸವರಾಜ ಜೋಗರಡ್ಡಿ,ಪರಸಪ್ಪ ವಡ್ಡರ,ರಾಜು ನಾಗೂರ,ಕಿರಣ ವಾಲೀಕಾರ, ರುದ್ರಪ್ಪ ಸುಂಕದ ಗ್ರಾಮದ ಮುಖಂಡರು, ಯುವಕರು ಭಾಗವಹಿಸಿದ್ದರು.

## ಮಳೆ ಆರ್ಭಟ ಮೂಡಲಗಿ ತಾಲೂಕಿನ ನಾಲ್ಕು ಸೇತುವೆಗಳು ಜಲಾವೃತ, ಸಂಚಾರ ಸ್ಥಗಿತ

**ಮೂಡಲಗಿ :** ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಘಟಪ್ರಭಾ ನದಿಯ ನೀರಿನ ಮಟ್ಟ ಹೆಚ್ಚಳವಾಗಿ ಮೂಡಲಗಿ ತಾಲೂಕಿನ ನಾಲ್ಕು ಸೇತುವೆಗಳು ಜಲಾವೃತವಾಗಿ ಸಂಚಾರ ಸ್ಥಗಿತವಾಗಿದೆ ಎಂದು ತಹಸೀಲ್ದಾರ ಶಿವಾನಂದ ಬಬಲಿ ಪತ್ರಿಕೆಗೆ ತಿಳಿಸಿದರು.



ಈ ಕುರಿತು ಮಾಹಿತಿ ನೀಡಿದ ಅವರು, ಮಹಾಲಿಂಗಪುರಕ್ಕೆ ಸಂಪರ್ಕ ಕಲ್ಪಿಸುವ ಅವರಾದಿ ಸೇತುವೆ, ಮೂಡಲಗಿಗೆ ಸಂಪರ್ಕ ಕಲ್ಪಿಸುವ ಸುಣದ-ೋಳಿ ಸೇತುವೆ ಹಾಗೂ ವಡೇರಹಟ್ಟಿ,ಉದಗಟ್ಟಿಗೆ ಸಂಪರ್ಕ ಕಲ್ಪಿಸುವ ವಡೇರಹಟ್ಟಿ ಸೇತುವೆ, ಹುಣಶ್ಯಾಳ ಪಿ ವೈಗೆ ಸಂಪರ್ಕ ಕಲ್ಪಿಸುವ ಕಮಲದಿನ್ನಿ ಸೇತುವೆಗಳು ಜಲಾವೃತಗೊಂಡಪರಿಣಾಮ ಸೇತುವೆಗಳ ಬದಿಯಲ್ಲಿ ಬ್ಯಾರಿಕೇಡ್ ಹಾಕಿ ಸಾರ್ವಜನಿಕರು ಸಂಚರಿಸದಂತೆ ಕಟ್ಟೆಚ್ಚರ ವಹಿಸಲಾಗಿದೆ ಎಂದು ತಿಳಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State